

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

SIHI KAHI

KANNADA DAILY MORNING
BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor: MARUTIBASAVANTAPPAHOSAMANI

Cell : +91 9741319119

RNI REG No. : KARKAN/2016/75068

Volume : 06 | Issue : 299 | Thursday 08-08-2024 | E-mail : maruti.b.hosamani76@gmail.com | Page: 4 | Price : Rs. 1/-


## ಸಾಂಸ್ಕೃತಿಕ ಮತ್ತು ಶಾರೀರಿಕ ಚಟುವಟಿಕೆಗಳ ವಿದ್ಯಾರ್ಥಿಗಳ ಭವಿಷ್ಯಕ್ಕೆ ಮೆಟ್ಟಿಲಾಗುತ್ತವೆ: ಸಿದ್ದರಾಮ ಶ್ರೀಗಳು



**ಕಲಕೇರಿ :** ದುರ್ಗುಣಗಳು ವ್ಯಕ್ತಿತ್ವವನ್ನು ಕ್ಷೀಣಿಸುತ್ತವೆ ಶಿಸ್ತು, ಸಂಯಮ ಹಾಗೂ ಕಲಿಕಾಸಕ್ತಿ, ಕ್ರೀಡೆ ಇನ್ನಿತರ ಚಟುವಟಿಕೆಗಳಲ್ಲಿ ಪ್ರತಿಯೊಬ್ಬರು ಸಕ್ರೀಯವಾಗಿ ಭಾಗಿ ಯಾಗುವುದರಿಂದ ವಿದ್ಯಾರ್ಥಿಗಳ ಬದುಕು ಸುಂದರ ಮತ್ತು ಸದೃಡ ಗೊಳ್ಳುತ್ತದೆ ಎಂದು ಕಲಕೇರಿ ಗುರು ಮರುಳಾರಾಧ್ಯರ ಹಿರೇಮಠದ ಸಿದ್ದರಾಮ ಶಿವಾಚಾರ್ಯರು ಹೇಳಿದರು.

ಕಲಕೇರಿ ಪಟ್ಟಣದ ಮಲ್ಲಿಕಾರ್ಜುನ ವಿಧ್ಯಾವರ್ಧಕ ಸಂಘದ ಅಡಿಯಲ್ಲಿ ನಡೆಯುತ್ತಿರುವ ಅನುದಾನಿತ ಶ್ರೀ ಬಸವೇಶ್ವರ ಪದವಿ ಪೂರ್ವ ಮಹಾ ವಿಧ್ಯಾಲಯದ ಆವರಣದಲ್ಲಿ ಮಂಗಳವಾರ ಬೆಳಿಗ್ಗೆ 10 ಘಂಟೆಗೆ ನಡೆದ 2024–25ನೇ ಸಾಲಿನ ಸಾಂಸ್ಕೃತಿಕ ಮತ್ತು ಶಾರೀರಿಕ ಚಟುವಟಿಕೆಗಳ ಉದ್ಘಾಟನೆ ಹಾಗೂ ಪ್ರಥಮ ಪಿಯುಸಿ ವಿಧ್ಯಾರ್ಥಿಗಳ ಸ್ವಾಗತ ಸಮಾರಂಭದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಿಗೆ ತಮ್ಮ ಪಾಲಕರ ಪೋಷಕರ ಅರಿವು ಇಟ್ಟು ಕೊಳ್ಳಬೇಕು. ಮನೆಯಲ್ಲಿ ಅನೇಕ ಕಷ್ಟ ಕಾರ್ಪಣ್ಯಗಳ ಮಧ್ಯೆಯೂ ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಯಾವುದೇ ತೊಂದರೆ ಯಾಗದಂತೆ ಅವರು ನೋಡಿ ಕೊಳ್ಳುತ್ತಾರೆ ಆದರೇ ಇಂದೂ ಅದೇಷ್ಟೋ ವಿದ್ಯಾರ್ಥಿಗಳು ಮೋಬೈಲ್ ಚಾಳಿಗೆ ಬಿದ್ದು ತಮ್ಮ ಉಜ್ವಲ ಭವಿಷ್ಯವನ್ನುಹಾಳು ಮಾಡಿಕೊಳ್ಳುತ್ತಿದ್ದಾರೆ ಇದು ವಿಷಾದನೀಯ ಇದೆಲ್ಲವನ್ನು ಬದಿಗೊತ್ತಿ ವಿದ್ಯಾ ಗುರುಗಳು ಮತ್ತು ಪಾಲಕರ ಮಾರ್ಗದರ್ಶನದಲ್ಲಿ ಮುನ್ನಡೆದು ಉತ್ತಮ ಪ್ರಜೆಗಳಾಗಿ ಹೊರ ಹೊಮ್ಮುವಂತೆ ವಿದ್ಯಾರ್ಥಿಗಳಿಗೆ ಕಿವಿ ಮಾತನ್ನು ಹೇಳಿದರು.

ಸಿಂದಗಿಯ ಎಚ್ ಜಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಎ.ಆರ್ ಹೆಗ್ಗಣದೊಡ್ಡಿ, ಕಲಕೇರಿ ಪಿಎಸ್ಐ ಸುರೇಶ ಮಂಟೂರ ವಿಶೇಷ ಉಪನ್ಯಾಸ ನೀಡಿದರು. ಸಂಸ್ಥೆಯ ಕಾರ್ಯದರ್ಶಿ ಮಲ್ಲಿಕಾರ್ಜುನ್ ಜೋಗುರ, ಸಂಸ್ಥೆಯ ಅಧ್ಯಕ್ಷ ಶಾಂತಗೌಡ ಪಾಟೀಲ ಮಾತನಾಡಿದರು. ಸಂಸ್ಥೆಯ ಹಿರಿಯ ನಿರ್ದೇಶಕ ಷಣ್ಮುಕಪ್ಪ ಝುಳಕಿ, ಮಲಕಾಜಪ್ಪಗೌಡ ಬಿರಾದಾರ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಪ್ರಾಚಾರ್ಯ ಎಸ್ ಹಿರೇಮಠ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಶಿಕ್ಷಣ ಇಲಾಖೆಯಲ್ಲಿ ಸೇವೆಯನ್ನು ಸಲ್ಲಿಸಿ ನಿವೃತ್ತರಾದ ಟಿಇಎಂ ಪ್ರೌಢ ಶಾಲೆಯ ಮುಖ್ಯಗುರು ಬಿ ಡಿ ಭಾಣಕಾರ ಮತ್ತು ದ್ವಿತಿಯ ದರ್ಜೆ ಸಹಾಯಕ ನಬಿಲಾಲ್ ಬಡೆಮಗೋಳ ಅವರನ್ನು ಸಂಸ್ಥೆಯ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಪುಷ್ಪಗಳನ್ನು ನೀಡಿ ಕಾಲೇಜಿಗೆ ಸ್ವಾಗತಿಸಿದರು. ಈ ವೇಳೆ ಕಾಲೇಜಿನ ವಿಧ್ಯಾರ್ಥಿಗಳಿಂದ ಸಾಂಸ್ಕೃತಿಕ, ಮನೊರಂಜನಾ ಕಾರ್ಯಕ್ರಮಗಳು ಜರುಗಿದವು. ಕಾರ್ಯಕ್ರಮದಲ್ಲಿ ಸಂಸ್ಥೆಯ ನಿರ್ದೇಶಕರಾದ ಸಿದ್ದಣ್ಣ ಚಳ್ಳಗಿ, ವೀರಪ್ಪ ಝುಳಕಿ, ಅಪ್ಪಾಸಾಬ ಗುಮಶೇಟ್ಟಿ, ಎಸ್ ಬಿ ಪಾಟೀಲ, ದೇವಿಂದ್ರ ಹುಲೆಂಕಿ, ಸಾಂತವೀರ ಧುರ್ಗಿ, ಎಸ್ ಎಸ್ ಕಲಶೇಟ್ಟಿ, ಬಿ ಜಿ ಚನಗೊಂಡ, ಜಿ ಜಿ ಮಡೆದಾರ, ರವಿಕುಮಾರ ಗುಮಶೆಟ್ಟಿ, ಬಸವರಾಜ್ ಕುಂಬಾರ, ವಿರೇಶ ಝುಳಕಿ, ಶಿವಕುಮಾರ ಚಿಕ್ಕಮಠ, ಭೋರಮ್ಮ ಗೋಟಗುಣಕಿ, ಸ್ವಪ್ನ ಸಜ್ಜನ್ ಮಡಿವಾಳಪ್ಪ ಹಯ್ಯಾಳ, ಕಾವೇರಿ ಪತ್ತಾರ ಸೇರಿದಂತೆ ಇತರರು ಇದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಮೈಬೂಬಬಾಷ ಮನಗೂಳಿ ತಾಳಿಕೋಟೆ.**

## ಗೀತಾ ಮ್ಯಾಕಲದೊಡ್ಡಿಗೆ ಒಲಿದ ಬಂಗಾರದ ಪದಕ



**ಮಸ್ಕಿ :** ಪಟ್ಟಣದ ಗೀತಾ.ತಂದೆ. ವೆಂಕಟೇಶ. ಮ್ಯಾಕಲದೊಡ್ಡಿ ಎನ್ನುವ ವಿದ್ಯಾರ್ಥಿನಿ ಲಿಂಗಸುಗೂರಿನ ಉಮಾ ಮಹೇಶ್ವರಿ ಪದವಿ ಕಾಲೇಜಿನಲ್ಲಿ ಬಿ.ಎಸ್ಸಿ, ಪದವಿಯ ಅಂತಿಮ ವರ್ಷದ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದುವ ಮೂಲಕ ಬಂಗಾರದ ಪದಕವನ್ನು ಪಡೆದಿದ್ದಾರೆ.

ಮಧ್ಯಮ ವರ್ಗದ ಕುಟುಂಬದ ವಿದ್ಯಾರ್ಥಿನಿ ಸತತ ಪ್ರಯತ್ನ, ಕಠಿಣ ಪರಿಶ್ರಮ ವಹಿಸಿ ಮಾಡಿದ ಸಾಧನೆ, ಪ್ರತಿಭೆ ಯಾರೊಬ್ಬರ ಸ್ವತ್ತಲ್ಲ, ಅದು ಹಣ ಅಂತಸ್ತಿನಿಂದ ದಕ್ಕುವಂತಹದ್ದಲ್ಲ ಶ್ರದ್ದೆ, ಶ್ರಮ, ಇದ್ದರೆ ಯಾರಾದರೂ ಸಾಧನೆ ಮಾಡ ಬಹುದೆಂಬ ಸಂದೇಶವನ್ನು ರವಾನಿಸಿದ್ದಾರೆ.

ಇದೇ ತಿಂಗಳು ನಡೆದ ಗುಲ್ಬರ್ಗ ವಿಶ್ವ ವಿದ್ಯಾಲಯದ 42 ನೇ ಘಟಿಕೋತ್ಸವದಲ್ಲಿ ಪದಕ ಮತ್ತು ಪ್ರಮಾಣ ಪತ್ರವನ್ನು ಪ್ರಧಾನ ಮಾಡಲಾಗುವು ದೆಂದು ವಿಶ್ವವಿದ್ಯಾಲಯ ಹಾಗೂ ಉಮಾ ಮಹೇಶ್ವರಿ ಪದವಿ ಕಾಲೇಜಿನ ಕಾರ್ಯಾಲಯ ಮಾಹಿತಿ ನೀಡಿದೆ.

ಇದರಿಂದ ಪುಳಕಿತರಾದ ಪಾಲಕರು ಮಗಳ ಸಾಧನೆಯನ್ನು ಶ್ಲಾಘಿಸಿದ್ದಾರೆ, ಜೊತೆಗೆ ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು, ಉಪನ್ಯಾಸಕರು, ಶುಭ ಕಾಮನೆಗಳನ್ನು ತಿಳಿಸಿದ್ದಾರೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಪ್ರತಾಪ್ ವಾಯ್.ಕಿಳ್ಳಿ. ಇಲಕಲ್ಲ.**

## "ಟೆಕ್ವಾಂಡೋ ಗರ್ಲ್" ಸಮರ ಕಲೆ ಚಿತ್ರ ಶೀಘ್ರದಲ್ಲೇ ಬಿಡುಗಡೆ



**ಬೆಂಗಳೂರು :** ಆತ್ರೇಯ ಕ್ರಿಯೇಶನ್ಸ್ ಅವರ ಡಾ. ಸುಮಿತಾ ಪ್ರವೀಣ್ ಚೊಚ್ಚಲ ನಿರ್ಮಾಣದ "ಟೆಕ್ವಾಂಡೋ ಗರ್ಲ್' ಸೌತ್ ಕೋರಿಯಾದ ಸಮರ ಕಲೆ ಚಿತ್ರ ಶೀಘ್ರದಲ್ಲೇ ರಾಜ್ಯಾದ್ಯಂತ ಚಿತ್ರ ಮಂದರಿಗಳಲ್ಲಿ ಬೆಳ್ಳಿ ತೆರೆಯ ಮೇಲೆ ರಂಜಿಸಲು ಬರುತ್ತಿದೆ.

ರವೀಂದ್ರ ವಂಶಿ ಆಕ್ಷನ್ ಕಟ್ ಹೇಳಿರುವ ಈ ಚಿತ್ರದಲ್ಲಿ ಹೆಣ್ಣು ಮಕ್ಕಳು ತಮಗೆ ತಾವೇ ಹೇಗೆ ರಕ್ಷಿಸಿ ಕೊಳ್ಳಬೇಕು ಎಂಬುದರ ಮಹತ್ತರ ಸಂದೇಶವಿದೆ. ಸುಮಾರು 200 ಮಕ್ಕಳಿಗೆ ಅವಕಾಶ ಕಲ್ಪಿಸಿದ ಸಾಮಾಜಿಕ ಕಳಕಳಿ ಇರುವ ಈ ಚಿತ್ರವನ್ನ ರಾಜ್ಯದ ಎಲ್ಲಾ ಶಾಲಾ ಮಕ್ಕಳಿಗೂ ತೋರಿಸ ಬೇಕು ಎಂಬುದು ನಿರ್ಮಾಪಕರ ಮನದಾಳದ ಮಾತು . ಮಗಳು ಋತು ಸ್ಪರ್ಶ ಸುಮಾರು ಎಂಟು ವರ್ಷಗಳಿಂದ ಟೆಕ್ವಾಂಡೋ ಸಮರ ಕಲೆಯನ್ನ ಕಲಿತು ನಾಲ್ಕು ಬಾರಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿ ಬ್ಲಾಕ್ ಬೆಲ್ಟ್ ಪಡೆದಿದ್ದಾಳೆ. ಜೊತೆಯಲ್ಲಿ ಅಂತಾರಾಷ್ಟ್ರೀಯ ನೃತ್ಯಗಾರ್ತಿಯು ಆಗಿರುವ ಈ ಅಪ್ಪಟ ದೇಸಿ ಕಲಾ ಪ್ರತಿಭೆಯ ಮೊದಲ ಚಿತ್ರ ಇದಾಗಿದ್ದರೂ ಬಿಡುಗಡೆಗೆ ವಿಳಂಬವಾಗಿ ಇದೀಗ ಸಿದ್ದವಾಗಿದೆ. ಈಗಾಗಲೇ ಕನ್ನಡದ ಬಾಲ್ಯ, ಗಂಗೆ ಗೌರಿ ತಾರಕೇಶ್ವರ ಚಿತ್ರಗಳಲ್ಲಿ ಅಭಿನಯಿಸಿದ್ದಾಳೆ. ತಾರಕೇಶ್ವರ ಚಿತ್ರದಲ್ಲಿ ಬಾಲಸುಬ್ರಹ್ಮಣ್ಯನಾಗಿ ಬಾಲಕನ ಪಾತ್ರದಲ್ಲಿ ಅಭಿನಯಿಸಿದ್ದಾಳೆ. 30 ದಿನಗಳ ಕಾಲ ನಡೆದಿರುವ ಈ ಚಿತ್ರೀಕರಣದಲ್ಲಿ ಸಮರ ಕಲಿಯನ್ನು ಹೇಳಿ ಕೊಟ್ಟವರು ಮಾಸ್ಟರ್ ವಿಘ ರವಿ. ಎರಡು ಹಾಡುಗಳು ಚಿತ್ರದಲ್ಲಿವೆ ಎಂದು ನಿರ್ಮಾಪಕಿ ಡಾ.ಸುಮಿತ ಪ್ರವೀಣ ತಿಳಿಸಿದ್ದಾರೆ.

ತಾರಾಬಳಗದಲ್ಲಿ ಋತು ಸ್ಪರ್ಶ, ಡಾ. ಸುಮಿತ ಪ್ರವೀಣ್ , ಪ್ರವೀಣ್ ಸಿ ಭಾನು , ಪಲ್ಲವಿ ರಾವ್, ಸಹನ ಶ್ರೀ , ವಿಘ ರವಿ ,ಸ್ವಾತಿ ಶಿವಮೊಗ್ಗ ,ರೇಖಾ ಕೂಡ್ಲಗಿ ಮೊದಲಾದವರು ಅಭಿನಯಿಸಿದ್ದು ,ತಾಂತ್ರಿಕ ವರ್ಗದಲ್ಲಿ ಛಾಯಾಗ್ರಹಣ ಪ್ರಮೋದ್ ಭಾರತೀಯ, ಸಾಹಿತ್ಯ ಮನೋಜ ಕುಮಾರ , ಸಂಗೀತ ಎಂ ಎಸ್ ತ್ಯಾಗರಾಜ, ಸಾಹಸ ವಿಘ ರವಿ , ಸಂಕಲನ ರವಿಚಂದನ್ ಸಿ, ಧ್ವನಿ ಗ್ರಹಣ ಕೃಸ್ಣಮೂರ್ತಿ, ಪ್ರಸಾಧನ ವೆಂಕಟೇಶ, ಕಲೆ ಚೇತನ್, ಪಿ.ಆರ್.ಓ ಆರ್. ರಜನಿಕಾಂತ್, ಪತ್ರಿಕಾ ಸಂಪರ್ಕ ವೀರೇಂದ್ರ ಬೆಳ್ಳಿಚುಕ್ಕಿ, ಡಾ.ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಿಗಿ , ಸಹ ನಿರ್ದೇಶನ ಅನಿಲ್, ಯುವಸೂರ್ಯ, ಸೂರಿ, ರಚನೆ ನಿರ್ದೇಶನ ರವೀಂದ್ರ ವಂಶಿ ಅವರದಿದ್ದು ಈ ಚಿತ್ರದ ಸಹ ನಿರ್ಮಾಪಕರು ಪ್ರವೀಣ್ ಸಿ ಭಾನು , ನಿರ್ಮಾಪಕರು ಡಾ. ಸುಮಿತ ಪ್ರವೀಣ್ ಅವರಾಗಿದ್ದಾರೆ.

**ವರದಿ : ಡಾ. ಪ್ರಭು ಗಂಜಿಹಾಳ–ಮೊ:9448775346**

## ಶರಣರು ದೇವರನ್ನು ಆತ್ಮದಲ್ಲಿ ಕಾಣಲು ತಿಳಿಸಿದ್ದಾರೆ: ಬಾಗೇವಾಡಿ



**ತಾಳಿಕೋಟಿ :** 12ನೇ ಶತಮಾನದಲ್ಲಿ ಸಮರಸ ಸಮಾಜದ ನಿರ್ಮಾಣಕ್ಕಾಗಿ ವೈಚಾರಿಕ ಕ್ರಾಂತಿಯನ್ನು ತಂದ ಅಣ್ಣಬಸವಣ್ಣನವರು ಆಧ್ಯಾತ್ಮಿಕ ಶೋಷಣೆಗೆ ಸಮಾಜದಲ್ಲಿ ದೇವರ ಕುರಿತು ಇರುವ ತಪ್ಪುಕಲ್ಪನೆಯೇ ಕಾರಣವೆಂದು ತಿಳಿಸಿ ದೇವರು ನಿರಾಕಾರಿ ಸರ್ವವ್ಯಾಪಿ ಹಾಗೂ ಸರ್ವಜ್ಞನಾಗಿದ್ದಾನೆ ಎಂದು ತಿಳಿಸಿದ್ದಾರೆ ಎಂದು ಶಿಕ್ಷಕ ದೇವರಾಜ ಬಾಗೇವಾಡಿ ಹೇಳಿದರು.

ಸೋಮವಾರ ಪಟ್ಟಣದ ಶ್ರೀ ಕಾಳಿಕಾದೇವಿ ಮಂದಿರದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ತಾಲೂಕ ಘಟಕ ಹಾಗೂ ಕದಳಿ ವೇದಿಕೆಯ ಸಹಯೋಗದಲ್ಲಿ ಶ್ರಾವಣ ಮಾಸದ ನಿಮಿತ್ಯ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಶರಣರು ಕಂಡ ದೇವರು ವಿಷಯದ ಕುರಿತು ಅವರು ಮಾತನಾಡಿದರು.

ಭಾರತ ಶ್ರೇಷ್ಠ ಆಧ್ಯಾತ್ಮಿಕ ಪರಂಪರೆಯನ್ನು ಹೊಂದಿದ ದೇಶ ಇಲ್ಲಿ ಹಲವಾರು ಧರ್ಮಗಳನ್ನು ಆಚರಿಸುವ ಜನರು ಇದ್ದಾರೆ ಎಲ್ಲ ಧರ್ಮಗಳಲ್ಲಿಯೂ ಏಕೀಶ್ವರ ವಾದವನ್ನು ಪ್ರತಿಪಾದಿಸಲಾಗಿದೆ.

ಬಸವಾದಿ ಶರಣರು ದೇವರನ್ನು ನಮ್ಮ ಅಂತರಾತ್ಮದಲ್ಲಿ ಕಾಣಲು ತಿಳಿಸಿದ್ದಾರೆ. ಆತ್ಮವನ್ನೇ ಅವರು ಲಿಂಗ ಎಂದು ತಿಳಿಸಿ ಅದರ ಶುದ್ಧೀಕರಣಕ್ಕಾಗಿ ಪ್ರಯತ್ನಿಸಿ ಎಂದು ತಿಳಿಸಿದ್ದಾರೆ ಎಂದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಪರಿಷತ್ತಿನ ತಾಲೂಕ ಅಧ್ಯಕ್ಷ ಅಶೋಕ ಹಂಚಲಿ ಅವರು ಇಡೀ ಜಗತ್ತಿನಲ್ಲಿಯೇ ಭಾರತ ಆಧ್ಯಾತ್ಮಿಕ ಶ್ರೀಮಂತಿಕೆಯನ್ನು ಪಡೆದ ದೇಶವಾಗಿದೆ ಇವತ್ತು ಇಡೀ ಜಗತ್ತು ಭಾರತದಡೆಗೆ ನೋಡುತ್ತಿದೆ ಭಾರತೀಯರಾದ ನಾವು ನಮ್ಮ ಕಡೆಗೆ ನೋಡುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕಾಗಿದೆ ಎಂದ ಅವರು ಶರಣ ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳು ನಡೆಸಲು ಆರ್ಥಿಕತೆಯ ಅಗತ್ಯವಿದೆ ಅದಕ್ಕಾಗಿ ದತ್ತಿ ನಿಧಿಯನ್ನು ಸ್ಥಾಪಿಸಲಾಗಿದೆ ಈಗಾಗಲೇ ಹಲವಾರು ಶರಣರು ನಿಧಿಯನ್ನು ಕೊಟ್ಟಿದ್ದಾರೆ ತಾವು ಸಹ ನೆನಪಿನಲ್ಲಿ ಸಹಕರಿಸಬೇಕು ಎಂದರು.

ಗಡಿಸೋಮನಾಳದ ಪರಮಪೂಜ್ಯ ಶ್ರೀ ಇಂದುಧರ ಮಹಾಸ್ವಾಮಿಗಳು ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಶರಣ ಶಿವಲಿಂಗಪ್ಪ ಪಾಲ್ಕಿ ದಾಸೋಹ ಗೈದರು. ವೇದಿಕೆಯಲ್ಲಿ ಕದಳಿ ವೇದಿಕೆ ಅಧ್ಯಕ್ಷೆ ಉಮಾ.ಜಿ. ಘೀವಾರಿ. ನಿವೃತ್ತ ಉಪನ್ಯಾಸಕ ಸಿ.ಲಿಂಗಪ್ಪ. ಈರಣ್ಣ ಕಲಬುರ್ಗಿ ಇದ್ದರು.

ಕಾರ್ಯಕ್ರಮದಲ್ಲಿ ಯುವ ಘಟಕ ಅಧ್ಯಕ್ಷ ಜಗದೀಶ ಬಿಳೇಭಾವಿ. ಗುಂಡುರಾವ್ ಧನಪಾಲ. ಸಿದ್ದು ಕರಡಿ. ಪ್ರಭು ಸಣ್ಣಕ್ಕಿ.ಮಹಾಂತೇಶ ಮುರಾಳ. ಎಸ್. ಎಂ.ಪಾಲ್ಕಿ. ಮುತ್ತು ಕ ಶೆಟ್ಟಿ ಅಶೋಕ ಚಿನಗುಡಿ. ಅಕ್ಕಮಹಾದೇವಿ ಪಾಟೀಲ. ಖಾಜಾಹುಸೇನ ಮುಲ್ಲಾ. ಮಹಾಂತೇಶ ಸರಶೆಟ್ಟಿ ಮತ್ತಿತರರು ಇದ್ದರು. ಶ್ರೀಮತಿ ಜಯಶ್ರೀ ಸಜ್ಜನ್ ಪ್ರಾರ್ಥಿಸಿದರು. ಶಿಕ್ಷಕ ವಾಲಿಕರ್ ಸ್ವಾಗತಿಸಿದರು. ಶರಣ ಸಾಹೇಬ ಗೌಡ ಬಿರಾದಾರ ನಿರೂಪಿಸಿದರು. ಮಲ್ಲನಗೌಡ ಪಾಟೀಲ ವಂದಿಸಿದರು.



**ಹುನಗುಂದ ತಾಲೂಕ ಆಡಳಿತದಿಂದ ನಡೆಯುವ ಸ್ವಾತಂತ್ರ್ಯ ದಿನಾಚರಣೆ ನಿಮಿತ್ತದ ಪೂರ್ವಭಾವಿ ಸಭೆ ತಹಶೀಲ್ದಾರ್ ನಿಂಗಪ್ಪ ಬಿರಾದಾರ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆಯಿತು.**
**ತಾಲೂಕ ಪಂಚಾಯತ ಇಓ ಮುರಳೀಧರ ದೇಶಪಾಂಡೆ ಹಾಗೂ ಸಿಪಿಐ ಸುನೀಲ ಸವದಿ ಸೇರಿದಂತೆ ತಾಲೂಕ ಮಟ್ಟದ ಎಲ್ಲ ಅಧಿಕಾರಿಗಳು ಹಾಜರಿದ್ದರು.**
**ಸಭೆಯನ್ನು ಉದ್ದೇಶಿಸಿ ಮಾತನಾಡಿದ ತಹಶೀಲ್ದಾರ್ ನಿಂಗಪ್ಪ ಬಿರಾದಾರ ಅವರು, ವಿವಿಧ ಇಲಾಖೆಗೆ ವಹಿಸಿದ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಿ ಸಮಾರಂಭ ಯಶಸ್ವಿಗೊಳಿಸಲು ತಿಳಿಸಿದರು. ಸಿರಸ್ತೆದಾರ ಶ್ರವಣಕುಮಾರ ಮುಂಡೆವಾಡಿ ಸ್ವಾಗತಿಸಿದರು. ಸೋಮಶೇಖರ ವಂದಿಸಿದರು.**

## ಬಳ್ಳೊಳ್ಳಿ ಗ್ರಾಮ ಪಂಚಾಯತ ಕಳಪೆ ನರೆಗಾ ಕಾಮಗಾರಿ



**ಝುಳಕಿ :** ಸಮೀಪದ ಬಳ್ಳೊಳ್ಳಿ ಗ್ರಾಮದಲ್ಲಿ ಗ್ರಾಮ ಪಂಚಾಯತ ಅನುದಾನದಡಿ ನರೇಗಾ ಹೆಸರಿನಲಿ ಕಳಪೆ ಗಾಮಗಾರಿ ನಡೆಸಿದ್ದಾರೆಂದು ರೈತರಾದ ವಿನಾಯಕ ಸೂರಪ್ಪ ಸಗಾಯಿ ಇವರ ಆರೋಪ, ಬಳ್ಳೊಳ್ಳಿ ಗ್ರಾಮದ ಸ/ನಂ : 188 3:ಎ, 26:ಗು ರಲ್ಲಿ ಗ್ರಾಮ ಪಂಚಾಯತ ಅನುದಾನದಡಿ ನನಗೆ ತಿಳಿಯದೆ ನರೇಗಾ ಯೋಜನೆಯಡಿಯಲ್ಲಿ ನನ್ನ ಹೆಸರಿನ ಮೇಲೆ ಕಾಮಗಾರಿ ನಡೆಸಿದ್ದಾರೆ, ಮತ್ತು ಕಳಪೆ ಕಾಮಗಾರಿ ನಡೆಸಿ ಹಣ ಕೂಡಾ ತೆಗೆದಿದ್ದಾರೆ, ನನಗೆ ತಿಳಿಯದ ಹಾಗೆ ಕಾಮಗಾರಿ ಮಾಡಲು ಗ್ರಾಮ ಪಂಚಾಯತನಲ್ಲಿನ ಅಧಿಕಾರಿಗಳು ಯಾವ ರೀತಿಯಲ್ಲಿ ಕಾಮಗಾರಿಗೆ ಜಿಪಿಎಸ್ ಮಾಡಿದರು ಮತ್ತು ಒಪ್ಪಿಗೆ ನಿಡಿದ್ದಾರೆ ಎಂದು ತಿಳಿಯದಂತಾಗಿದೆ.

ಈ ವಿಷಯ ತಿಳಿದ ಕೂಡಲೆ ನಾನು ತಾಲೂಕಾ ಪಂಚಾಯತ, ಜಿಲ್ಲಾ ಪಂಚಾಯತಗಳಿಗೆ ಮನವಿ ಸಲ್ಲಿಸಿದ್ದು, ಇಲ್ಲಿಯ ವರೇಗು ಯಾವುದೇ ತರನಾದ ಕ್ರಮ ಕೈಗೊಂಡಿಲ್ಲ, ಮೇಲಾಧಿ ಕಾರಿಗಳು ಈ ವಿಷಯವನ್ನು ಪರಿಶೀಲಿಸಿ ಕಾನೂನಾತ್ಮಕ ಕ್ರಮ ಕೈಗೊಳ್ಳುವಂತೆ ಮತ್ತು ಅಧಿಕಾರಿಗಳು ನ್ಯಾಯಕೊಡಿಸುವಂತೆ ಪ್ರಕಟಣೆ ಮೂಲಕ ವಿನಂತಿಸಿಕೊಂಡರು.

## ಆರೋಗ್ಯ ಕಾಳಜಿ ಅವಶ್ಯ



**ಅಮಿನಗಡ :** ಒತ್ತಡದ ಇಂದಿನ ಜೀವನ ಶೈಲಿಯಲ್ಲಿ ಆರೋಗ್ಯಕ್ಕೆಹೆಚ್ಚಿನಗಮನನೀಡಬೇಕಿದ್ದು,ರೋಗಗಳು ಬರುವುದಕ್ಕಿಂತ ಮೊದಲೇ ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸಬೇಕು ಎಂದು ತಾಲೂಕ ಆರೋಗ್ಯ ನಿರೀಕ್ಷಕ ಜಿ.ಬಿ.ಭದ್ರಣ್ಣವರ ಹೇಳಿದರು.

ಕಲ್ಲಗೋನಾಳ ಗ್ರಾಮದಲ್ಲಿ ಅಮೀನಗಡದ ಸಂಗಮೇಶ್ವರ ಪದವಿ ಮಹಾವಿದ್ಯಾಲಯ ಆಯೋಜಿಸಿದ್ದ 2023–24ನೇ ಸಾಲಿನ ರಾಷ್ಟೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದಲ್ಲಿ ಎಚ್.ಐ.ವಿ, ಕುಷ್ಟರೋಗ, ಭ್ರೂಣಹತ್ಯೆ ನಿರ್ಮೂಲನೆ ಕುರಿತು ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಣ್ಣ ಪುಟ್ಟ ರೋಗಗಳು ಬಂದರೂ ನಿರ್ಲಕ್ಷ್ಯ ವಹಿಸದೆ ತಪಾಸಣೆ ಮಾಡಿಸಿಕೊಳ್ಳಬೇಕು, ತಮ್ಮ ಆರೋಗ್ಯದ ಕುರಿತು ಹೆಚ್ಚಿನ ಕಾಳಜಿ ತೆಗೆದುಕೊಳ್ಳಬೇಕು ಎಂದರು. ಸಮುದಾಯ ಆರೋಗ್ಯ ಅಧಿಕಾರಿ ಕುಮಾರಿ ಪ್ರೀತಿ ಮಚಗಾರ ಮಾತನಾಡಿ, ಸಾರ್ವಜನಿಕರು ಸರ್ಕಾರಿ ಆಸ್ಪತ್ರೆಯಲ್ಲಿ ಸಿಗುವ ಸೌಲಭ್ಯಗಳನ್ನ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಸಂಗಮೇಶ್ವರ ಪದವಿ ಕಾಲೇಜ ಪ್ರಾಚಾರ್ಯ ಆರ್.ಜಿ.ಬಡಿಗೇರ್, ಉಪನ್ಯಾಸಕರಾದ ಎಂ.ಬಿ.ನೇಗಲಿ, ಎಚ್.ಜೆ.ಸತ್ತರಗಿ, ಬಿ.ಎಂ.ಮಾದರ, ಡಿ.ಆರ್.ಕುಬಸದ, ಎನ.ಎಸ್.ಎಸ್ ಶಿಬಿರಾರ್ಥಿಗಳು ಹಾಗೂ ಗ್ರಾಮದ ಪ್ರಮುಖರು ಉಪಸ್ಥಿತರಿದ್ದರು.

## ವಿವಿಧ ಬೇಡಿಕೆ ಈಡೇರಿಕೆಗಾಗಿ ಸರ್ಕಾರಕ್ಕೆ ಒತ್ತಾಯಿಸಿ ಮನವಿ



**ತಾಳಿಕೋಟಿ :** 2016ರಕ್ಕಿಂತ ಪೂರ್ವ ನೇಮಕಾತಿ ಹೊಂದಿದ ಪ್ರಾಥಮಿಕ ಶಿಕ್ಷಕರಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸುವುದರ ಜೊತೆಗೆ ಶಿಕ್ಷಕರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ(ರಿ) ಬೆಂಗಳೂರು ತಾಲೂಕ ಘಟಕ ತಾಳಿಕೋಟಿ ವತಿಯಿಂದ ಸೋಮವಾರ ತಹಶೀಲ್ದಾರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಮನವಿ ಪತ್ರದಲ್ಲಿ 2016ಕ್ಕಿಂತ ಪೂರ್ವ ನೇಮಕಾತಿ ಹೊಂದಿದ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಜಿಪಿಟಿ ಶಿಕ್ಷಕರಲ್ಲಿ ವಿಲೀನಗೊಳಿಸುವುದು ಹಾಗೂ ಸ್ಥಗಿತಕೊಂಡಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಭರ್ತಿ ಪ್ರಕ್ರಿಯೆಯನ್ನು ಆರಂಭಿಸಬೇಕು ಮತ್ತು 2016ರ ಪೂರ್ವದಂತೆ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಮುಖ್ಯ ಗುರುಗಳು ಹಾಗೂ ಹಿರಿಯ ಮುಖ್ಯ ಗುರುಗಳ ಹುದ್ದೆಗೆ ಸೇವಾ ಜೇಷ್ಠತೆಯ ಆಧಾರದ ಮೇಲೆ ಭರ್ತಿ ಪ್ರಕ್ರಿಯೆಯನ್ನು ಶೀಘ್ರದಲ್ಲಿಯೇ ಆರಂಭಿಸಬೇಕು. ಸಾಮಾಜಿಕ ನ್ಯಾಯದ ಪರ ಧ್ವನಿಯಾಗಿರುವ ತಾವುಗಳು ಲಕ್ಷಾಂತರ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಆಗುತ್ತಿರುವ ಬಹುದೊಡ್ಡ ಅನ್ಯಾಯವನ್ನು ಗಂಭೀರವಾಗಿ ಪರಿಗಣಿಸಿ ತುರ್ತಾಗಿ ಒಂದು ಕಾರ್ಯಕಾರಿ ಆದೇಶವನ್ನು ಹೊರಡಿಸಲು ಸರ್ಕಾರ–ಕ್ಕೆ ಒತ್ತಾಯಿಸಬೇಕು. ಈ ಮೂಲಕ ಉಲ್ಲಂಘನೆಯಾಗಿರುವ ನಿಯಮಗಳನ್ನು ಸರಿಪಡಿಸುವುದರ ಜೊತೆಗೆ ನಿರಂತರ ಸೇವಾನುಭವ ಮತ್ತು ಉನ್ನತ ವಿದ್ಯಾರ್ಹತೆ ಹೊಂದಿರುವ ಸೇವಾನಿರತ ನಿರ್ದೇಶಕರಿಗೆ ಯಾವುದೇ ರೀತಿಯ ತಾರತಮ್ಯ ಹಾಗೂ ಅನ್ಯಾಯವಾಗದಂತೆ ನಿಯಮ ರೂಪಿಸಬೇಕು ಈ ಮೇಲಿನ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಅವುಗಳನ್ನು ಪರಿಹರಿಸುವ ನಿಟ್ಟಿನಲ್ಲಿ ನಮ್ಮ ಸಂಘಟನೆಯು ಹಲವಾರು ಬಾರಿ ಇಲಾಖೆಗೆ

ಮನವಿ, ಸಲಹೆಗಳನ್ನು ನೀಡಿಯೂ ಪ್ರಯೋಜನಕ್ಕೆ ಬಾರದೆ ಹೋಗಿರುವುದು ಬಹಳ ಬೇಸರದ ಸಂಗತಿಯಾಗಿದೆ ಈ ಎಲ್ಲಾ ಸಂಗತಿಗಳಿಗೆ ಇಲಾಖೆಯ ನೀತಿ ನಿಯಮಗಳಲ್ಲಿನ ಸಮನ್ವತೆಯ ಕೊರತೆಯಿಂದ ಮತ್ತು ಪರಿಹಾರ ದೊರಕುವಲ್ಲಿ ವಿಳಂಬತೆ ಆಗಿದೆ ಎಂದು ತಿಳಿಸಲಾಗಿದೆ. ಪ್ರಾ.ಶಾ.ಶಿ. ಸಂಘದ ತಾಲೂಕ ಅಧ್ಯಕ್ಷ ಬಿ.ಟಿ. ವಜ್ಜಲ. ಉಪಾಧ್ಯಕ್ಷ ಟಿ.ಎಸ್.ಲಮಾಣಿ. ಪ್ರಧಾನ ಕಾರ್ಯದರ್ಶಿ ಎಸ್.ಬಿ.ಬೀರಗೊಂಡ. ಪದಾಧಿಕಾರಿಗಳಾದ ಎಮ್.ಎಲ್.ಎಲ್ ಚೌದ್ರಿ. ಶ್ರೀಮತಿ ಆರ್.ಬಿ.ಆಲೂರ. ಅಂಬಿಕಾ ಗೋಗಿ. ಶ್ರೀಮತಿ ಎ. ಆರ್. ಹಜೇರಿ. ಎ.ಡಿ. ಗೋನಾಳ.ಎಸ್.ಎಸ್. ಲಿರ್ಘ.ಎಸ್.ಯರಗಲ್ಲ. ಸಾವಿತ್ರಿಬಾಯಿ ಘುಲೆ ಸಂಘದ ಅಧ್ಯಕ್ಷೆ ಎಸ್.ಬಿ.ಹೂಗಾರ. ನಾಮನಿರ್ದೇಶಿತ ಜಿಲ್ಲಾಧ್ಯಕ್ಷ ಜಿ.ಕೆ.ಪತ್ತಾರ. ಶಿಕ್ಷಕರ ಸೊಸೈಟಿ ಅಧ್ಯಕ್ಷ ಆರ್. ಎಸ್.ಹಿಪ್ಪರಗಿ.ಎನ್.ಜಿ.ಓ. ಅಧ್ಯಕ್ಷ ಎನ್. ಎಸ್.ದೊಡಮನಿ. ಕಾರ್ಯದರ್ಶಿ ಶಿವರಾಜ ಚೌದ್ರಿ.ಎಸ್.ಆರ್.ವಾಲಿಕಾರ. ಆರ್.ಎಂ.ಡೋಣಿ. ಎಸ್.ಎಂ.ಪಾಲ್ಕಿ. ಬಿ.ಆರ್.ವಿಜಾಪೂರ. ಆರ್.ಎ. ಬಿಜಾಪೂರ. ಕೆ.ಬಿ.ಬಿರಾದಾರ. ಶ್ರೀಮತಿ. ಯು. ಎಂ.ಸಾಲಂಕಿ. ಶ್ರೀಮತಿ ಎಸ್.ಸಿ.ಬನ್ನೆಟ್ಟಿ. ಜಿ.ಕೆ.ಮಣೂರ.ಎಸ್. ವಾಯ್.ಜಾಲವಾದಿ ಮತ್ತಿತರರು ಇದ್ದರು.

## ತೇರದಾಳ ಪುರಸಭೆಗೆ ಬೀಗ ಹಾಕಿದ ಸದಸ್ಯರು । ಆಡಳಿತಾಧಿಕಾರಿ, ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಆಕ್ರೋಶ

# ಸಾಮೂಹಿಕವಾಗಿ ರಾಜಿನಾಮೆ ನೀಡಲು ಮುಂದಾದ ಸದಸ್ಯರು!







**ತೇರದಾಳ :** ಪುರಸಭೆಗೆ ನೇಮಕಗೊಂಡಿರುವ ಆಡಳಿತಾಧಿಕಾರಿ ಹಾಗೂ ಪುರಸಭೆ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಬೇಸತ್ತ ಪುರಸಭೆ ಸರ್ವ ಸದಸ್ಯರು ಪಕ್ಷಾತೀತವಾಗಿ ಪುರಸಭೆಗೆ ಬೀಗ ಜಡಿದು ಧರಣಿ ನಡೆಸಿದ ಘಟನೆ ಮಂಗಳವಾರ ನಡೆಯಿತು.

ಪುರಸಭೆಗೆ ಆಡಳಿತಾಧಿಕಾರಿ ನೇಮಕಗೊಂಡು ಬರೋಬ್ಬರಿ ಒಂದುವರೆ ವರ್ಷ ಗತಿಸಿದೆ. ಆದರೆ ಇದುವರೆಗೆ ಸದಸ್ಯರ ಸಭೆ ನಡೆಸಿಲ್ಲ. ಭೀಕರ ಬರಗಾಲ ಎದುರಾದ ಸಮಯದಲ್ಲಿ ಕೂಡ ಪಟ್ಟಣಕ್ಕೆ ಬೇಟಿ ನೀಡಲಿಲ್ಲ. ಇದರಿಂದಾಗಿ ಪುರಸಭೆಯಲ್ಲಿನ ಮುಖ್ಯಾಧಿಕಾರಿ ಸೇರಿದಂತೆ ಕರ ವಸೂಲಿಕಾರರು ಆರೋಗ್ಯ ವಿಭಾಗ ಹಾಗೂ ಅಭಿಯಂತರರು ಯಾವುದೇ ಕೆಲಸಗಳನ್ನು ಮಾಡುತ್ತಿಲ್ಲ. ಸದಸ್ಯರಾದ ನಮಗೆ ಬೆಲೆ ನೀಡುವುದಿಲ್ಲ. ಯಾವುದೇ ಕೆಲಸ ಹೇಳಿದರು ಸ್ಪಂಧಿಸುವುದಿಲ್ಲ. ಅನುದಾನ ಬಂದಿದ್ದರು ಅಭಿವೃದ್ಧಿಗೆ ಕ್ರಮ ಕೈಗೊಳ್ಳುತ್ತಿಲ್ಲ. ಪಟ್ಟಣದಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ದಿನೇ ದಿನೆ ಹೆಚ್ಚಾಗುತ್ತಿವೆ. ಅಧಿಕಾರಿಗಳ ಬೇಜವಾಬ್ದಾರಿತನದಿಂದ ತೇರದಾಳ ಪಟ್ಟಣದ ಹೆಸರು ಹಾಳಾಗುತ್ತಿದ್ದು, ಅಧಿಕಾರಿಗಳ ಕಾರ್ಯವೈಖರಿಗೆ ಬೇಸತ್ತು ಸಾಮೂಹಿಕ ರಾಜಿನಾಮೆ ನೀಡಲು ಮುಂದಾಗಿದ್ದೇವೆ ಎಂದು ಸದಸ್ಯರಾದ ಸುರೇಶ ಕಬಾಡಗಿ, ಸಚಿನ ಕೊಡತೆ, ಸಂತೋಷ ಜಮಖಂಡಿ, ಮೌಲಾಅಲಿ ಚಿತ್ರಬಾನುಕೋಟೆ, ಪುಷ್ಪಲತಾ ಬಂಕಾಪುರ, ಶೆಟ್ಟೆಪ್ಪ ಸುಣಗಾರ ಆಕ್ರೋಶದಿಂದ ಹೇಳಿದರು.

ಸಂಧಾನಕ್ಕೆ ಯತ್ನ-ಧರಣಿ ನಡೆಸುತ್ತಿರುವ ಮಾಹಿತಿ ತಿಳಿಯುತ್ತದ್ದಂತೆ ಸ್ಥಳಕ್ಕೆ ಆಗಮಿಸಿದ ತೇರದಾಳ ತಹಸೀಲ್ದಾರ್ ವಿಜಯಕುಮಾರ ಕಡಕೋಳ, ಪಿಎಸ್ಐ ಅಪ್ಪಣ್ಣ ಐಗಳಿ, ಪ್ರವಾಹ ವೀಕ್ಷಣೆಗೆ ಕಂದಾಯ ಸಚಿವರು ಆಗಮಿಸಿದ್ದರಿಂದ ಆಡಳಿತಾಧಿಕಾರಿ ಆಗಿರುವ ಉಪವಿಭಾಗಾಧಿಕಾರಿಗಳು ಅವರ ಜೊತೆಗಿದ್ದಾರೆ. ಆದ್ದರಿಂದ ನಾಳೆ ಸದಸ್ಯರುಗಳ ಹಾಗೂ ಅಧಿಕಾರಿಗಳ ಸಭೆ ನಡೆಸುತ್ತಾರೆ. ಈಗ ಧರಣಿ ಕೈಬಿಡಿ ಎಂದು ಮನವಿ ಮಾಡಿದರು. ಆದರೆ ಇದಕ್ಕೆ ಒಪ್ಪದ ಸದಸ್ಯರುಗಳು ಅಧಿಕಾರಿಗಳಿಂದ ನಮ್ಮ ಗೌರವಕ್ಕೆ ಚ್ಯುತಿ ಬಂದಿದೆ. ಪಟ್ಟಣದಲ್ಲಿ ಸಾರ್ವಜನಿಕರು ಥೀ ಥೂ ಎಂದು ಉಗಿಯುತ್ತಿದ್ದಾರೆ. ಅಧಿಕಾರಿಗಳು ಮಾಡುವ ತಪ್ಪಿಗೆ ನಾವು ಏಕೆ ಅನ್ನಿಸಿಕೊಳ್ಳಬೇಕು. ಆಡಳಿತಾಧಿಕಾರಿ ಬರುವವರೆಗೆ ಇಲ್ಲಿಂದ ಏಳುವುದಿಲ್ಲ ಎಂದು ಧರಣಿ ಮುಂದುವರೆಸಿದರು.

ಮಾಜಿಗಳ ಬೆಂಬಲ-ಪುರಸಭೆ ಸದಸ್ಯರು ಕಚೇರಿಗೆ ಬೀಗ ಹಾಕಿ ಧರಣಿ ನಡೆಸುತ್ತಿರುವುದರ ಬಗ್ಗೆ ಮಾಹಿತಿ ತಿಳಿದ ಪುರಸಭೆ ಮಾಜಿ ಅಧ್ಯಕ್ಷರುಗಳಾದ ನಿಂಗಪ್ಪಣ್ಣ ಮಾಲಗಾಂವಿ, ಪ್ರವೀಣ ನಾಡಗೌಡ, ಬಸರಾಜ ಬಾಳಿಕಾಯಿ, ಹನಮಂತ ರೋಡನ್ನವರ, ಇಸಾಕ ಮೋಮಿನ, ಸಿದ್ದು ಅಮ್ಮಣಗಿ, ಭುಜಬಲಿ ಕೆಂಗಾಲಿ, ಪಿ.ಎಸ್. ಮಾಸ್ತಿ, ಅಶೋಕ ಆಳಗೊಂಡ, ಸದಸ್ಯರುಗಳು ರಾಜಿನಾಮೆ ನೀಡಲು ಮುಂದಾಗಿದ್ದಾರೆಂದರೆ ಅವರಿಗೆ ಅಧಿಕಾರಿಗಳ ಕಾರ್ಯವೈಖರಿಗೆ ಎಷ್ಟೋಂದು ಮಾನಸಿಕ ಆಗಿರಬೇಕು. ಇದನ್ನು ನಾವು ಖಂಡಿಸುತ್ತೇವೆ. ಅಗತ್ಯ ಬಿದ್ದರೆ ಪಟ್ಟಣ ಬಂದ್ ಮಾಡಿ ಅಧಿಕಾರಿಗಳ ವಿರುದ್ಧ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಎಲ್ಲರೂ ಹೊರಗೆ-ಕಚೇರಿ ಸಮಯ ಪ್ರಾರಂಭಗೊಳ್ಳುವ ಮೊದಲೆ ಕಚೇರಿಗೆ ಬೀಗ ಹಾಕಿ ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಮಹಾತ್ಮ ಗಾಂಧೀಜಿ ಭಾವಚಿತ್ರ ಇಟ್ಟು ಧರಣಿ ಪ್ರಾರಂಭಗೊಂಡಿತ್ತು. ಇದರಿಂದ ಪುರಸಭೆ ಅಧಿಕಾರಿ ಸಿಬ್ಬಂದಿಗಳು ಥಂಬ್ ಕೂಡ ಮಾಡದೆ ಹೊರಗೆ ನಿಲ್ಲಬೇಕಾಯಿತು. ಕೆಲವೊಂದು ಸಲ ಜಿಟಿ ಜಿಟಿ ಮಳೆ ಬಂದಾಗಲೂ ಮಳೆಯಲ್ಲಿಯೇ ನಿಲ್ಲಬೇಕಾಯಿತು. ಸದಸ್ಯರಾದ ಅನ್ನಪೂರ್ಣ ಹೊಸಮನಿ, ಸಂಗೀತಾ ಪಾಟೀಲ, ರೂಪಾ ಕುಂಬಾರ, ನಸ್ರೀನ್‌ಬಾನು ನಗಾರ್ಜಿ, ಕುಮಾರ ಸರಿಕರ, ಆಧಿನಾಥ ಸಪ್ತಸಾಗರ, ಪಜಲ್ ಅತಾರಾವುತ್, ಪೈಜುಲ್ಲಾ ಇನಾಂದಾರ, ಲಕ್ಷ್ಮಣ ನಾಯಕ, ಮಹೇಶ ಕಾಲತಿಪ್ಪಿ ಇದ್ದರು.

# ಯೋಜನೆಗಳ ಹೆಸರಲ್ಲಿ ಸಾಮಾನ್ಯ ಜನರಿಗೆ ಮೋಸ ಮಾಡುತ್ತಿರುವ ಸರ್ಕಾರ



**ಝಳಕಿ :** ಇಂದಿನ ರಾಜ್ಯ ಸರ್ಕಾರ ಯೋಜನೆಗಳ ಹೆಸರಿನಲ್ಲಿ ಜನ ಸಾಮಾನ್ಯರ ಹಣವನ್ನು ನೀರಿನಂತೆ ಲೂಟಿ ನಡಸಿ ಜನರ ಕಣ್ಣಿಗೆ ಮಣ್ಣೆರೆಚುವ ಕಾಯಕ ನಡೆಸಿದೆ ಎಂದು ಕರ್ನಾಟಕ ರಕ್ಷಣ ವೇದಿ ಇಂಡಿ ತಾಲುಕಾಉಪಾಧ್ಯಕ್ಷರಾದ ಪ್ರಕಾಶಗೌಡ ಬಿರಾದಾರ ಝಳಕಿ ಗ್ರಾಮದ ಪ್ರವಾಸಿ ಮಂದಿರದಲ್ಲಿ ಪತ್ರಿಕಾ ಗೋಷ್ಠಿ ನಡೆಸಿ ಆರೋಪ ವ್ಯಕ್ತಪಡಿಸಿದರು.

ಇಗಾಗಲೆ ವಾಲ್ಮೀಕಿ ಸಮಾಜದ ಅಭಿವೃದ್ಧಿ ನಿಗಮನದ ಅನುದಾನ ಮತ್ತು ಭೋವಿ ಸಮಾಜದ ನಿಗಮದ ಅನುದಾನ ಲೂಟಿಮಾಡಿ ಜನರಿಗೆ ಬಸರತಂದಿದೆ, ಇನ್ನು ಹೊಸದಾಗಿ ಇನ್ನೊಂದು ಹೆಜ್ಜೆ ಮುಂದಿಟ್ಟು ಸರ್ಕಾರ ಜನರ ಕಣ್ಣಿಗೆ ಬಟ್ಟೆಕಟ್ಟಿ ಮಣ್ಣೆರೆಚುವ ಕಾರ್ಯ ನಡೆಸಿದೆ, ಇಗಾಗಲೆ ರಾಜ್ಯದಲ್ಲಿ ಇರುವಂತಹ ಸರ್ಕಾರಿ ಹಾಸ್ಟೇಲ್‌ಗಳಲ್ಲಿ ಶೌಚಾಲಯದ ವ್ಯವಸ್ಥೆ, ಕೋಣೆಗಳ ದುರಾವಸ್ಥೆ, ಸಿ.ಸಿ ಕ್ಯಾಮೇರಾಗಳು ಇಲ್ಲದೆ ಸಂಪೂರ್ಣವಾದ ವಾತಾವರಣ ಹದೆಗೆಟ್ಟಿವೆ.

ನಮ್ಮ ಸಮೀಪದ ಹೋರ್ತಿ ನವೋದಯ ಶಾಲೆಯಲ್ಲಿ ಇರುವಂತಹ ಎಲ್ಲ ಶೌಚಾಲಗಳು ಸಂಪೂರ್ಣವಾಗಿ ನಾಶವಾಗಿದ್ದು, ಶೌಚಾಲಯಗಳಲ್ಲಿ ಕಸದರಾಶಿ ತುಂಬಿದೆ, ಶಾಲೆಯ ಕಿಟಕಿಗಳು ಸಂಘರ್ಣ ನಾಶವಾಗಿವೆ, ಇಲ್ಲಿ ಸಿ.ಸಿ.ಕ್ಯಾಮೇರಾಗಳಿಲ್ಲ ಇಂತಹ ಅವಸ್ಥೆ ಇದ್ದರು ಇಲ್ಲಿನ ಆಡಳಿತ ಮೇಲಾಧಿಕಾರಿಗಳಿಗೆ ಇಲ್ಲಿರುವಂತಹ ವ್ಯವಸ್ಥೆ ಬಗ್ಗೆ ತಿಳಿದ್ದಾರೋ ಇಲ್ಲೊ ಗೊತ್ತಿಲ್ಲ, ಹೀಗೆ ಸುಮಾರು ಹಾಸ್ಟೇಲಗಳಲ್ಲಿ ಸಿ.ಸಿ.ಕ್ಯಾಮೇರಾಗಳು, ಸಿಬ್ಬಂದಿ ಕೊರತೆ ಹಿಗೆ ಹಳೆಯ ಹಾಸ್ಟೆಲಗಳಲ್ಲಿ ಇರುವಂತಹ ಸಮಸ್ಯೆಗಳನ್ನು ಬಗ್ಗೆ ಗಮನ ಹರಿಸದೆ, ಹೊಸದಾಗಿ ಹಾಸ್ಟೇಲಗಳ ನಿರ್ಮಾಣ ಕಾರ್ಯ ಮಾಡುವದು ಸೂಕ್ತವಲ್ಲ.

ಇಗಿರುವಂತಹ ಹಾಸ್ಟೇಲಗಳ ಸುಧಾರಣೆ ಮೊದಲು ಮಾಡಿ ನಂತರ ಹೊಸದಾಗಿ ಹಾಸ್ಟೇಲಗಳನ್ನು ನಿರ್ಮಾಣ ಮಾಡಿದರೆ ಸೂಕ್ತ, ಹೊಸದಾಗಿ ನಿರ್ಮಾಣ ಮಾಡುವ ಉದ್ದೇಶ ಇಷ್ಟೆ ನಿರ್ಮಾಣ ಹೆಸರಿನಲ್ಲಿ ಅನುದಾನವನ್ನು ಕಳಪೆ ಮಟ್ಟದ ಕಾಮಗಾರಿ ಮಾಡೋದು, ಕಮೀಷನ್ ಎತ್ತೊದು, ಹಿಗೆ ಹಲವಾರು ಕಾರಣಗಳಿಂದ ಜನ ಸಾಮಾನ್ಯರ ದುಡ್ಡು ಕೊಳ್ಳೆ ಹೊಡೆಯೋದೆ ಇಗೀನ ಸರ್ಕಾರದ ಉದ್ದೇಶ, ಆದ್ದರಿಂದ ಸರ್ಕಾರ ಮತ್ತು ಸರ್ಕಾರಿ ಅಧಿಕಾರಿಗಳು ಕೂಡಲೆ ಹಳೆಯ ಹಾಸ್ಟೇಲಗಳ ವಿಕ್ಷಣೆ ಮಾಡಿ, ಇಲ್ಲಿನ ಸಮಸ್ಯೆಗಳನ್ನು ಬಗೆಹರಿಸಿ, ನಂತರ ಹೊಸದಾಗಿ ಹಾಸ್ಟೆಲಗಳ ನಿರ್ಮಾಣ ಮಾಡಬೇಕು ಇಲ್ಲವಾದಲ್ಲಿ ಮುಂದಿನ ಅನಾಹುತಗಳಿಗೆ ಇಗೀನ ಸರ್ಕಾರ ಮತ್ತು ಇಲಾಖೆಗೆ ಸಂಭಂದಪಟ್ಟ ಅಧಿಕಾರಿಗಳೆ ಜವಾಬ್ದಾರರು.

ಈ ಸಂದರ್ಬದಲ್ಲಿ ರವಿಕುಮಾರ ಹೂಗಾರ, ಜೆಡಿಎಸ ರಾಜ್ಯ ಎಸ್ಸಿ, ಎಸ್.ಟಿ ಉಪಾಧ್ಯಕ್ಷ ಮರೇಪ್ಪಣ್ಣ ಗಿರಣಿವಡ್ಡರ, ಪಿಂಟುದಾದಾ ಹಾಡ್ಸಂಗೆ, ಲಕ್ಷ್ಮಣ ಕಾಗರ, ಬಾಲಕೃಷ್ಣ ಭೊಸಲೆ, ಅಮಸಿದ್ದ ಢಾಳೆ, ದೀಪು ಅಲೆಗಾಂವಿ, ಶಂಕರ ಬಡಿಗೇರ, ಸಿದ್ದಾರಾಮ ನಿಚ್ಚಳ ಹಾಗೂ ಕರ್ನಾಟಕ ರಕ್ಷಣಾ ವೇದಿ ಸರ್ವ ಸದಸ್ಯರು ಉಪಸ್ಥಿತರಿದ್ದರು.

# ವ್ಯಸನ ಮುಕ್ತ ಸಮಾಜ ನಿರ್ಮಿಸಲು ಶ್ರಮಿಸಿ: ಡಾ. ಯಲ್ಲಪ್ಪ ನಾಯಕ



**ತಿಕೋಟಾ :** ಪಟ್ಟಣದ ಬಿ.ಎಲ್.ಡಿ.ಇ ಸಂಸ್ಥೆಯ ನೂತನ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಇಂದು ಮಹಾವಿದ್ಯಾಲಯದ ಸಭಾಭವನದಲ್ಲಿ ಬೆಳಿಗ್ಗೆ 11 ಗಂಟೆಗೆ ಆಯ್,ಕ್ಯೂ.ಎಸಿ ಹಾಗೂ ಸಾಂಸ್ಕೃತಿಕ ಘಟಕಗಳ ಸಂಯೋಕ್ತ ಆಶ್ರಯದಲದಲ್ಲಿ ಡಾ.ಮಹಾಂತ ಶಿವಯೋಗಿ ಅವರ ಜನ್ಮದಿನಾವಾದ ಆಗಸ್ಟ್ 1 ನ್ನು 'ವ್ಯಸನ ಮುಕ್ತದಿನ'ವನ್ನಾಗಿ ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ಉದ್ಘಾಟಿಸಿ ಮಾತನಾಡಿದ ಅವರು ಮದ್ಯಪಾನ ಮಾದಕ ದ್ರವ್ಯಗಳ ಸೇವನೆಯಿಂದ ದುಶ್ಚಟಗಳು ಖಿನ್ನತೆಗೆ ಕಾರಣವಾಗಬಹುದು. ಕೆಲವರು ರೈತರು ತಮ್ಮ ಹೊಲಗಳಲ್ಲಿ ಹಣದ ಆಮಿಷಕ್ಕೊಳಗಾಗಿ ಗಾಂಜಾ, ಕೊಕೇನ್, ಬ್ರೌನ್, ಶುಗರ್, ಅಫೀಮುಗಳಂತಹ ಮಾದಕ ವಸ್ತುಗಳನ್ನು ಬೆಳೆಯುತ್ತಾರೆ. ಅಂತವರಿಗೆ ವಿದ್ಯಾರ್ಥಿಗಳು ಅರಿವು ಮೂಡಿಸಬೇಕು ಎಂದು ಹೇಳಿದರು. ಸಾಂಸ್ಕೃತಿಕ ಘಟಕದ, ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಬಸವರಾಜ ಸಾಲವಾಡಗಿ ಪ್ರಾಸ್ತಾವಿಕ ಮಾತನಾಡಿ ದೇಶವನ್ನೇ ಹಾಳು ಮಾಡುವ ದುರ್ವ್ಯಸನ ಹಾಗೂ ದುಷ್ಚಟಗಳ ದಾಸ್ಯದಿಂದ ಜನಸಾಮಾನ್ಯರನ್ನು ಹೊರತರಲು ಜನರ ಎಲ್ಲಾ ದಶ್ಚಟಗಳ ವಸ್ತುಗಳನ್ನು ತಮ್ಮ ಜೋಳಿಗೆಗೆ ಹಾಕಿಕೊಂಡು ಸಮಾಜ ಸುಧಾರಣೆಯ ಕಾರ್ಯದಲ್ಲಿ ತಮ್ಮನ್ನು ತಾವು ತೊಂಡಗಿಸಿಕೊಂಡವರು ಡಾ.ಮಹಾಂತ ಶಿವಯೋಗಿಗಳು ಎಂದು ಹೇಳಿದರು.

ಪ್ರಾಚಾರ್ಯ ಪ್ರೊ ಆರ್.ಬಿ.ಸಿರಸಂಗಿ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು ದುಶ್ಚಟಗಳು ವ್ಯಕ್ತಿಯ ಬದುಕ, ಕುಟುಂಬ ಮಾತ್ರವಲ್ಲದೆ ಸಮಾಜದ ಮೇಲು ನೇರ ಪರಿಣಾಮ ಬೀರುತ್ತದೆ. ಮಾದಕ ವಸ್ತು ಸೇವನೆ ವ್ಯಕ್ತಿಯ ಮೆದಳು, ದೈಹಿಕ, ಮಾನಸಿಕ ಆರೋಗ್ಯ ಹಾಗೂ ಸಾಮಾಜಿಕ ಬದುಕಿಗೂ ಮಾರಕವಾತ್ತದೆ ಎಂದು ಹೇಳಿದರು ನಂತರ ಪ್ರತಿಜ್ಞಾವಿಧಿ ಬೋಧಿಸಲಾಯಿತು, ಹಾಗೇ ವಿದ್ಯಾರ್ಥಿಗಳಿ ಬಹುಮಾನ ಹಾಗೂ ಪ್ರಮಾಣಪತ್ರ ವಿತರಿಸಲಾಯಿತು.

ಹುಕ್ಕೇರಿ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಸೋಮಶೇಖರಪ್ಪ ಎಚ್ ಪ್ರೊ.ಎಂ ಆರ್ ಖಾನಾಪುರ ಶ್ರೀ ಆರ್.ಘನಾಗಣ್ಣವರ ಡಾ.ರವಿಚಂದ್ರವಾಲಿಕಾರ ಸಂಜಯ ರಾಠೋಡ ಶಿವಮೂರ್ತಿ ಚಿಕ್ಕನರ್ತಿ ಕೃಷ್ಣಮೂರ್ತಿ.ಸಿ ಎನ್ ಸುರೇಶ ಉಪ್ಪಾರ ಶ್ರೀಮತಿ ಎಲ್.ಬಿ ದೇಸಾಯಿ ಜೇವನಾರ ಸಂತೋಷ ಹೆಗಡೆ ನಾಗರಾಜ ನರಳೆ ಸೇರಿದಂತೆ ಮಹಾವಿದ್ಯಾಲಯದ ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಡಾ.ಎಂ.ಬಿ ಹೂಗಾರ ಸ್ವಾಗತಿಸಿದರು. ಅಸ್ಲಂ ಮುಲ್ಲಾ ಕಾರ್ಯಕ್ರಮ ನಿರೂಪಿಸಿದರು ಸ್ವಪ್ನಾ ಹಾಲಹಳ್ಳಿ ವಂದಿಸಿದರು.

# ಸಹಕಾರ ಪ್ರಕೋಷ್ಠದ ಜಿಲ್ಲಾ ಸಂಚಾಲಕರಾಗಿ ಜಿ.ಎಸ್.ಗೊಂಬಿ ನೇಮಕ



**ಮಹಾಲಿಂಗಪುರ :** ಪಟ್ಟಣದ ನೇಕಾರ ಮುಖಂಡರು, ಪುರಸಭೆ ಮಾಜಿ ಅಧ್ಯಕ್ಷರಾದ ಜಿ.ಎಸ್.ಗೊಂಬಿ ಅವರನ್ನು ತೇರದಾಳ ಮತಕ್ಷೇತ್ರದಿಂದ ಬಾಗಲಕೋಟೆ ಬಿಜೆಪಿ ಜಿಲ್ಲಾ ಸಹಕಾರ ಪ್ರಕೋಷ್ಠದ ಜಿಲ್ಲಾ ಸಂಚಾಲಕರನ್ನಾಗಿ ನೇಮಕಗೊಳಿಸಲಾಗಿದೆ ಎಂದು ಬಿಜೆಪಿ ಬಾಗಲಕೋಟೆ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

## ಹಿಪ್ಪರಗಿ ಬ್ಯಾರೇಜ್ ಒಳ ಹರಿವು 2,91,697 ಕ್ಯೂಸೆಕ್ ರಬಕವಿ ನಗರದ ಹೊರವಲಯಕ್ಕೆ ನೀರು



**ರಬಕವಿ-ಬನಹಟ್ಟಿ:** ಸಮೀಪದ ಹಿಪ್ಪರಗಿ ಜಲಾಶಯಕ್ಕೆ ಗುರುವಾರ ಬೆಳಿಗ್ಗೆ 2,91,697 ಕ್ಯೂಸೆಕ್ ನೀರು ಒಳ ಹರಿವು ಇದ್ದು, 2,90,947 ಕ್ಯೂಸೆಕ್ ಹೊರ ಹರಿವು ದಾಖಲಾಗಿದೆ.

ಮಹಾರಾಷ್ಟ್ರದ ಗಡಿ ಭಾಗದಲ್ಲಿರುವ ಕಲ್ಲೋಳ ಬ್ಯಾರೇಜ್ ನಿಂದ ನದಿಗೆ 2,88,649 ಕ್ಯೂಸೆಕ್ ನೀರು ಹರಿದು ಬರುತ್ತಿದೆ. ಕೃಷ್ಣಾ ಜಲಾನಯನ ಪ್ರದೇಶಗಳಲ್ಲಿ ಮತ್ತು ಮಹಾರಾಷ್ಟ್ರದ ವಿವಿಧ ಜಲಾಶಯಗಳಿಂದ ಕೃಷ್ಣಾ ನದಿಗೆ ನೀರು ಬಿಡುತ್ತಿರುವುದರಿಂದ ನದಿಗೆ ಇನ್ನೂ ಬಹಳಷ್ಟು ನೀರು ಹರಿದು ಬರುತ್ತಿದೆ. ಮಹಾರಾಷ್ಟ್ರದ ಜಲಾನಯನ ಪ್ರದೇಶಗಳಾದ ಕೊಯ್ನಾ: 7.4 ಸೆಂ.ಮೀ, ನವುಜಾ: 10.4 ಸೆಂ.ಮೀ, ಮಹಾಬಳೇಶ್ವರ: 6.2 ಸೆಂ.ಮೀ, ತಾರಳಿ: 9.5 ಸೆಂ.ಮೀ, ವಾರಣಾ: 8.5 ಸೆಂ.ಮೀ, ರಾಧಾನಗರಿ: 12.4 ಸೆಂ.ಮೀ ಮಳೆಯಾದ ವರದಿಯಾಗಿದೆ. ರಬಕವಿ ನಗರದ ಸಮೀಪ ನೀರು; ಕೃಷ್ಣಾ ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಾಗುತ್ತಿದ್ದಂತೆ ರಬಕವಿ ನಗರದ ಹೊರ ವಲಯದಲ್ಲಿರುವ ಹೊಲ ತೋಟಗಳಲ್ಲಿ ನೀರು ಆವರಿಸುತ್ತಿದೆ.

## ಭಲೇ ಭಲೇ ಭಾಕರ್



ಅರಳಿದ ಕಂಗಳು ಕನಸಿನ ಗರಿಗಳು
ಕೈಬೀಸಿ ಕರೆದಿದೆ ಆಟಕ್ಕೆ
ಕರದಲಿ ಪಿಸ್ತೂಲು ಹಿಡಿದು ಬಂದಳು
ಛಲದಲಿ ಒಲಂಪಿಕ್ಸ್ ಆಟಕ್ಕೆ ॥

ಜನುಮ ಭೂಮಿಗೆ ವಂದಿಸುತಲಿ
ಕೃಷ್ಣನ ನೆನೆದಳು ಮನದಲ್ಲಿ
ಅರ್ಜುನನಂತೆ ಗುರಿಯಿಟ್ಟು ಕಣದಲಿ
ಆಟವಾಡಿದಳು ದಿಟ್ಟತನದಲಿ ॥

ಭಾರತ ದೇಶದ ಹೆಮ್ಮೆಯ ಪಟುವು
ಮನುವೆಂಬ ಮನೆಯ ಮಗಳು
ಎರಡೆರಡು ಕಂಚಿನ ಪದಕವ ಗಳಿಸಿ
ವಂದಿಸಿದಳು ತ್ರಿವರ್ಣ ಧ್ವಜಕೆ ॥

ಪ್ಯಾರಿಸ್ ನೆಲದಲಿ ಕೇಳಲು ರಾಷ್ಟ್ರಗೀತೆ
ನಮ್ಮಯ ಮೈನವಿರೇಳುತಲಿ
ಮಿಂಚಿನ ಹೊಳಪು ಕಂಚಿನ ಝಳಪು
ಬೆರಗುಗಣ್ಣಲಿ ನೋಡುತಲಿ ॥

ಸತತ ಅಭ್ಯಾಸಗೈಯುತ ಮನುವು
ಚಿನ್ನಕ್ಕೆ ಗುರಿಯನು ಇಟ್ಟಿಹಳು
ಇಂದಲ್ಲ ನಾಳೆ ಪದಕ ಸುವರ್ಣವನು
ಭಾರತಾಂಬೆಗೆ ಅರ್ಪಿಸುವಳು ॥

ಭಲೇ ಭಲೇ ಹುಡುಗಿ ಭಾಕರ್ ಬೆಡಗಿ
ಮನೆ ಮನೆಯಲೂ ನೀ ಹೆಸರಾದೆ
ಮನ್ನಣೆ ಗಳಿಸುತ ಪದಕಗಳ ಪಡೆಯುತ
ಮೊಳಗಲಿ ನಮ್ಮಯ ಕೀರ್ತಿ ಪತಾಕೆ ॥

– ಲತಾ ಕೆ.ಎಸ್. ಹೆಗಡೆ ಬೆಂಗಳೂರು

# ಕಾಲೇಜು ರಸ್ತೆ ಬಂದ್: ವಿದ್ಯಾರ್ಥಿಗಳ ಸಂಖ್ಯೆ ವಿರಳ ಒಂದು ವಾರದಿಂದ ವಿದ್ಯಾರ್ಥಿಗಳಿಗೆ ಸಮಸ್ಯೆ




**ರಬಕವಿ-ಬನಹಟ್ಟಿ :** ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ತೆರಳುವ ಮಾರ್ಗದ ಅಂದಾಜು ಅರ್ಧ ಕಿ.ಮೀ ದೂರದಷ್ಟು ರಸ್ತೆ ಮಾರ್ಗವು ಕೃಷ್ಣಾ ನದಿಯ ನೀರಿನಿಂದಾಗಿ ಜಲಾವೃತಗೊಂಡಿದೆ. ಇದರಿಂದಾಗಿ ಬನಹಟ್ಟಿ, ಆಸಂಗಿ, ಅಸ್ಕಿ ಹಾಗೂ ಇನ್ನಿತರ ಗ್ರಾಮಗಳಿಂದ ಕಾಲೇಜಿಗೆ ಬರುವ ವಿದ್ಯಾರ್ಥಿಗಳಿಗೆ ಬಹಳಷ್ಟು ತೊಂದರೆಯಾಗಿದೆ.

ಬಾಗಲಕೋಟೆ ವಿಶ್ವ ವಿದ್ಯಾಲಯದ ದ್ವಿತೀಯ ಸೆಮಿಸ್ಟರ್ ವಿದ್ಯಾರ್ಥಿಗಳ ಪರೀಕ್ಷೆಗಳು ಹತ್ತಿರವಾಗುತ್ತಿದೆ. ಇನ್ನೂ ನಾಲ್ಕೈದು ದಿನಗಳ ಕಾಲ ಕಾಲೇಜು ಕಾರ್ಯನಿರ್ವಹಿಸುತ್ತದೆ. ಆದ್ದರಿಂದ ಈ ವಿದ್ಯಾರ್ಥಿಗಳು ಕಾಲೇಜಿಗೆ ಬರಲು ಸಾಧ್ಯವಾಗುತ್ತಿಲ್ಲ. ಕಾಲೇಜಿಗೆ ಬರುವ ಬಸ್ ರಬಕವಿ ಬನಹಟ್ಟಿ, ರಾಮಪುರ, ಹೊಸೂರ ಮತ್ತು ಬನಹಟ್ಟಿ ಮಾರ್ಗವಾಗಿ ಬರುತ್ತಿದೆ. ಆದರೆ ಬನಹಟ್ಟಿ ನಗರದ ಹಳೆಯ ನೀರಿನ ಟ್ಯಾಂಕ್ ಹತ್ತಿರದ, ಆಸಂಗಿ, ಅಸ್ಕಿ ಗ್ರಾಮದ ವಿದ್ಯಾರ್ಥಿಗಳು ಕಾಲೇಜಕ್ಕೆ ಬರಲು ಸಾಧ್ಯವಾಗುತ್ತಿಲ್ಲ.

> **ಪರೀಕ್ಷೆಗಳು ಹತ್ತಿರವಾಗಿದ್ದು, ಕಾಲೇಜು ಕೂಡಾ ಮುಗಿಯಲು ಬಂದಿದೆ. ಕೃಷ್ಣಾ ನದಿಯ ನೀರಿನಿಂದಾಗಿ ನಮಗೆ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿದೆ.**
> । ಪ್ರವೀಣ ಖಟಾವಕರ ವಿದ್ಯಾರ್ಥಿ

ಈ ವಿದ್ಯಾರ್ಥಿಗಳಿಗೆ ಬಸ್ ಸೌಕರ್ಯವಿಲ್ಲ. ಸದ್ಯದರಲ್ಲಿಯೇ ನದಿಯ ನೀರಿನ ಮಟ್ಟವೂ ಇಳಿಯುವಂತೆ ಕಾಣುತ್ತಿಲ್ಲ. ಆದ್ದರಿಂದ ನೂರಾರು ವಿದ್ಯಾರ್ಥಿಗಳಿಗೆ ಬಹಳಷ್ಟು ತೊಂದರೆಯಾಗಿದೆ ಎಂದು ಇಲ್ಲಿಯ ವಿದ್ಯಾರ್ಥಿಗಳಾದ ಸ್ವಾತಿ ನಾಯಿಕ, ಆಮರಿನ್ ಮುಲ್ಲಾ, ಮಹಾದೇವ ಕುರಿ, ರಾಜಶೇಖರ ಭಾವಿಕಟ್ಟಿ, ಸೋಮು ಹಳ್ಳಾಳ, ಸಂದೇಶ ಪರೀಟ್ ಸೇರಿದಂತೆ ಅನೇಕರು ತಮ್ಮ ಸಮಸ್ಯೆ ತೋಡಿಕೊಂಡಿದ್ದಾರೆ.

ಕಾಲೇಜಿಗೆ ನಡೆದುಕೊಂಡು ಹೋಗಬೇಕಾದರೆ ಐದಾರು ಕಿ.ಮೀ ಸುತ್ತು ಹಾಕಿ ಹೋಗಬೇಕಾಗಿದೆ. ಇನ್ನು ಬಸ್ ನಿಲ್ದಾಣವೂ ಕೂಡಾ ದೂರದಲ್ಲಿದೆ.

# ಬರೆಯುವ ಬದ್ಧತೆಯಿಂದ ಜೀವನೋತ್ಸಾಹ



**ರಬಕವಿ :** ಸಾಹಿತಿಗಳು ಯಾವುದೇ ಕೀರ್ತಿಗಾಗಿ, ಪ್ರಶಸ್ತಿಗಳಿಗಾಗಿ ಬರೆಯದೆ ತಮ್ಮ ಜೀವನದ ಅನುಭವಗಳನ್ನು ಹಂಚಿಕೊಳ್ಳಲು ಬರೆಯುತ್ತಾರೆ. ಆದ್ದರಿಂದ ಬರೆಯುವ ಬದ್ಧತೆಯಿಂದ ಜೀವನದಲ್ಲಿ ಉತ್ಸಾಹ ಪಡೆದುಕೊಳ್ಳಲು ಸಾಧ್ಯ. ವೃತ್ತಿಯ ನಂತರವೇ ನಿಜವಾದ ಜೀವನ ಆರಂಭವಾಗುತ್ತದೆ ಎಂದು ಹಾರೂಗೇರಿಯ ನಿವೃತ್ತ ಪ್ರಾಚಾರ್ಯ ವಿ. ಎಸ್. ಮಾಳಿ ತಿಳಿಸಿದರು.

ಭಾನುವಾರ ಇಲ್ಲಿನ ಎಂ. ವಿ. ಪಟ್ಟಣ ಶಾಲೆಯ ಶಿಕ್ಷಕ, ವಿನೋದ ಸಾಹಿತಿ ಯಶವಂತ ವಾಜಂತ್ರಿ ವಯೋ ನಿವೃತ್ತಿ ಹೊಂದಿದ ಸಂದರ್ಭದಲ್ಲಿ ಹಮ್ಮಿಕೊಳ್ಳಲಾದ 'ಅರವತ್ತರ ಅರಳು' ಬೀಳ್ಕೊಡುವ ಸಮಾರಂಭದಲ್ಲಿ ಮಾತನಾಡಿದರು.

ಸಾರಸ್ವತ ಲೋಕವನ್ನು ನಿರ್ಮಾಣ ಮಾಡುವ ದಿಶೆಯಲ್ಲಿ ಪ್ರೋತ್ಸಾಹ ಅಗತ್ಯ. ಕಾವ್ಯ ಮತ್ತು ಸಾಹಿತ್ಯ ವ್ಯಕ್ತಿಗಳ ಮೇಲೆ ಸಾಕಷ್ಟ ಪ್ರಭಾವ ಬೀರುತ್ತವೆ. ಒಡೆದ ಹೃದಯಗಳನ್ನು ಕಟ್ಟುವುದೇ ಸಾಹಿತ್ಯ ಎಂದು ಮಾಳಿ ತಿಳಿಸಿದರು.

ನಿವೃತ್ತ ಉಪನ್ಯಾಸಕ ಎಂ. ಎಸ್. ಬದಾಮಿ ಮಾತನಾಡಿ, ಹಾಸ್ಯ ಸಾಹಿತಿಗಳ ಜೀವನ ದುಃಖದಿಂದ ಕೂಡಿರುತ್ತದೆ. ದುಃಖವನ್ನು ನೀಗಿಸಿಕೊಂಡು ಬರೆಯುವುದು ಬಹಳ ದೊಡ್ಡದು. ಹಾಸ್ಯ ಸಾಹಿತ್ಯಕ್ಕೆ ಬೇಕಾಗುವ ಪೂರಕ ಸಾಹಿತ್ಯವನ್ನು ಓದುವುದು ಅಗತ್ಯವಾಗಿದೆ ಎಂದರು.

ಚಿದಾನಂದ ಗಾಳಿ ಅಧ್ಯಕ್ಷತೆ ವಹಿಸಿದ್ದರು.

ಹಿರಿಯ ಪತ್ರಕರ್ತ ನೀಲಕಂಠ ದಾತಾರ, ಕ್ಷೇತ್ರ ಶಿಕ್ಷಣಾಧಿಕಾರಿ ಬಸನ್ನವರ, ಕಸಾಪ ಅಧ್ಯಕ್ಷ ಮ. ಕೃ. ಮೇಗಾಡಿ, ಮಹಾದೇವ ಕವಿಶೆಟ್ಟಿ, ಬಿ.ಎಸ್. ಮಟ್ಟಿಕಲ್ಲಿ ಹಾಗೂ ಯಶವಂತ ವಾಜಂತ್ರಿ, ಮಾತನಾಡಿದರು.

ಪ್ರಾಚಾರ್ಯ ಬಿ. ಎಸ್. ಕಾಂಬಳೆ, ಪಿ. ಎಚ್. ಪ್ರತಾಪ, ರಾಜೇಶ ನೋಟದ, ಮಹಾಂತೇಶ ಮುರಗೋಡ, ಅಮ್ಮಲಜೇರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಜನ್ಮದಿನ ಸಾರ್ಥಕವಾಗಲು ಸಮಾಜಮುಖಿ ಕಾಯಕ ಮಾಡಿ: ಗುರುಸಿದ್ಧೇಶ್ವರ ಶ್ರೀಗಳು



**ರಬಕವಿ :** ಜನ್ಮ ದಿನಗಳು ಸಾರ್ಥಕವಾಗಲು ಸಮಾಜಮುಖಿ ಕಾಯಕ ಮಾಡಿ ಎಂದು ರಬಕವಿ ಗುರುದೇವ ಬ್ರಹ್ಮಾನಂದ ಆಶ್ರಮದ ಶ್ರೀ ಗುರುಸಿದ್ಧೇಶ್ವರ ಶ್ರೀಗಳು ಕರೆ ನೀಡಿದರು.

ಬುಧವಾರ ರಬಕವಿಯ ಗುರುದೇವ ಬ್ರಹ್ಮಾನಂದ ಆಶ್ರಮದಲ್ಲಿ ಶ್ರೀಗಳು ತಮ್ಮ ಜನ್ಮದಿನದ ನಿಮಿತ್ಯ ಹಮ್ಮಿಕೊಂಡ ಶುಭ ಸಮಾರಂಭದಲ್ಲಿ ಭಕ್ತರನ್ನುದ್ದೇಶಿಸಿ ಅವರು ಮಾತನಾಡಿದರು. ನಮ್ಮ ಜನ್ಮ ದಿನವನ್ನು ಬುತ್ತಿ ಹಬ್ಬ ಎಂದು ಆಚರಿಸುತ್ತಿರುವುದು ನಮಗೆ ಸಂತಸ ತಂದಿದೆ ಎಂದರು.

ಗುರುವಿನ ಅವಶ್ಯಕತೆಗೆ ಹೆಚ್ಚು ಪ್ರಾಮುಖ್ಯತೆ ಮತ್ತು ಒತ್ತು ಕೊಡುವುದಕ್ಕೆ ಕಾರಣವೆಂದರೆ, ಗುರುಗಳಿಲ್ಲದೆ ನೀವು ನಿಮ್ಮನ್ನು ಪರಿವರ್ತಿಸಿಕೊಳ್ಳಲು ಸಾಧ್ಯವಿಲ್ಲ. ನೀವು ನಿಮಗೆ ತಿಳಿದಿರುವ ಕೆಲಸಗಳನ್ನಷ್ಟೇ ಮಾಡಬಲ್ಲಿರಿ. ನಿಮಗೆ ಗೊತ್ತಿಲ್ಲದ ವಿಷಯದಲ್ಲಿ ನಿಮ್ಮನ್ನು ನೀವು ಹೇಗೆ ಪರಿವರ್ತಿಸಿಕೊಳ್ಳಬಹುದು? ಅದಾಗಬೇಕಾದರೆ ಅಸ್ತಿತ್ವದ ಶಕ್ತಿಯ ಪ್ರತಿಯೊಂದು ಅಂಶಗಳ ನೈಸರ್ಗಿಕ ಪ್ರವೃತ್ತಿಯನ್ನು ನೀವು ಗಮನದಿಂದ ನೋಡುವಷ್ಟು ಪ್ರಜ್ಞಾವಂತರಾಗಿರಬೇಕು. ಆ ಮಟ್ಟದ ಪ್ರಜ್ಞೆಯನ್ನು ಹೊಂದಿರುವ ವ್ಯಕ್ತಿ ಮಾತ್ರ, ಗುರು ಇಲ್ಲದೆ ಪರಿವರ್ತನೆ ಹೊಂದಲು ಸಾಧ್ಯ. ಪ್ರತಿಹಂತದಲ್ಲೂ ನಿಮಗೆ ಮಾರ್ಗದರ್ಶವಾಗಬೇಕಾದರೆ ಗುರುವಿನ ಅವಶ್ಯಕತೆ ಇದೆ ಎಂದು ಶ್ರೀಗಳು ತಿಳಿಸಿದರು.

ಇದೇ ಸಂದರ್ಭದಲ್ಲಿ ಹಿಂದೂಪರ ಸಂಘಟನೆಗಳ ಮುಖಂಡ ನಂದು ಗಾಯಕವಾಡ ಮಾತನಾಡಿ, ಶ್ರೀ ಗುರುಸಿದ್ಧೇಶ್ವರ ಶ್ರೀಗಳ ಜನ್ಮ ದಿನದಂದು ನೂರಾರು ಮಹಿಳೆಯರು ರೊಟ್ಟಿ ಬುಟ್ಟಿಗಳಲ್ಲಿ ಬುತ್ತಿ ತಂದು ಸಾವಿರಾರು ಭಕ್ತರಿಗೆ ಅನ್ನದಾಸೋಹ ಮಾಡುವ ಕಾಯಕ ನಿಜವಾಗಲೂ ಇದೊಂದು ಭಾರತೀಯ ಸಂಪ್ರದಾಯದ ಕಾಯಕವಾಗಿದೆ. ಅಲ್ಲದೆ ಶ್ರೀಗಳು ಇಂದು ಹತ್ತು ಗಿಡಗಳನ್ನು ನೆಟ್ಟಿದ್ದು ತುಂಬಾ ಸಂತಸ ತಂದಿದೆ ಎಂದರು.

ಸಮಾರಂಭದಲ್ಲಿ ರಬಕವಿ, ಬನಹಟ್ಟಿ, ಚಿಮ್ಮಡ, ಹಾರೂಗೇರಿ, ಹನಗಂಡಿ, ತೇರದಾಳ, ಮದನಮಟ್ಟಿ, ಹಳಿಂಗಳಿ, ಜಗದಾಳ, ನಾವಲಗಿ, ಯಲ್ಲಟ್ಟಿ, ಆಸಂಗಿ ಸೇರಿದಂತೆ ಅನೇಕ ಗ್ರಾಮಗಳಿಂದ ಭಕ್ತರು ಆಗಮಿಸಿ ಶ್ರೀಗಳಿಗೆ ಶುಭಕೋರಿದರು.

# ಘಟಪ್ರಭಾ ನದಿಗೆ 62 ಸಾವಿರ ಕ್ಯೂಸೆಕ್ ನೀರು



**ಮಹಾಲಿಂಗಪುರ :** ಕಳೆದ 10–12 ದಿನಗಳಿಂದ ಉಕ್ಕಿ ಹರಿಯುತ್ತಿರುವ ಘಟಪ್ರಭಾ ನದಿಗೆ ಬರುತ್ತಿರುವ ನೀರಿನ ಪ್ರಮಾಣ ಮಂಗಳವಾರ ಕಡಿಮೆಯಾಗಿತ್ತು. ಬುಧವಾರ ಮುಂಜಾನೆ 40 ಸಾವಿರ ಕ್ಯೂಸೆಕ್ ಗೆ ಇಳಿದ್ದ ನೀರು, ಬುಧವಾರ ಸಂಜೆ 6ರ ವೇಳೆಗೆ 53 ಸಾವಿರಕ್ಕೆ ಏರಿಕೆಯಾಗಿತ್ತು. ಗುರುವಾರ ಮುಂಜಾನೆ 58 ಸಾವಿರ, ಮಧ್ಯಾಹ್ನಕ್ಕೆ ಸುಮಾರು 62 ಸಾವಿರ ಕ್ಯೂಸೆಕ್‌ಗೆ ಏರಿಕೆಯಾಗಿದೆ.

ಬುಧವಾರ ಮಧ್ಯಾಹ್ನ 3ರ ಮಾಹಿತಿಯಂತೆ ಘಟಪ್ರಭಾ ನದಿಗೆ ಹಿಡಕಲ್ ಜಲಾಶಯ ಮತ್ತು ಹಿರಣ್ಯಕೇಶಿ ನದಿಯಿಂದ ಸೇರಿ ದುಪದಾಳ ಜಲಾಶಯದಿಂದ ಘಟಪ್ರಭಾ ನದಿಗೆ 55,415 ಒಳಹರಿವು ಇದ್ದು, ಮಾರ್ಕಂಡೇಯ ಜಲಾಶಯದಿಂದ 4410, ಬಳ್ಳಾರಿನಾಲಾ 2174 ಸೇರಿದಂತೆ ಒಟ್ಟು 61, 999 ಕ್ಯೂಸೆಕ್ ನೀರು ಘಟಪ್ರಭಾ ನದಿಗೆ ಹರಿದು ಬರುತ್ತಿದೆ.

**ಅಲ್ಪ ಇಳಿಮುಖ :** ಘಟಪ್ರಭಾ ಪ್ರವಾಹದಿಂದ ಸಂಪೂರ್ಣ ಜಲಾವೃತವಾಗಿರುವ ನಂದಗಾಂವ ಮತ್ತು ಢವಳೇಶ್ವರ ತಂಗುಪ್ರದೇಶದ ಮನೆಗಳಿಗೆ ನುಗ್ಗಿದ ನೀರು ಗುರುವಾರವು ಸಹ 4–5 ಅಡಿಯಷ್ಟು ಇಳಿದಿದೆ. ನಡುಗಡ್ಡೆಯಾದ ನಂದಗಾಂವ ಗ್ರಾಮದ ರಸ್ತೆಯ ಮೇಲಿನ ನೀರು ಇನ್ನು ಕಡಿಮೆಯಾಗಿಲ್ಲ. ಶುಕ್ರವಾರ ಮುಂಜಾನೆ ವೇಳೆಗೆ ನಡುಗಡ್ಡೆಯಾದ ನಂದಗಾಂವಗೆ ಹೋಗುವ ರಸ್ತೆ ಮೇಲಿನ ನೀರು ಕಡಿಮೆಯಾಗಬಹುದು ಎಂದು ಢವಳೇಶ್ವರ–ನಂದಗಾಂವ ನೊಡೆಲ್ ಅಧಿಕಾರಿ ವೆಂಕಟೇಶ ಬೆಳಗಲ್ ತಿಳಿಸಿದ್ದಾರೆ.

**ಸುತ್ತುವರೆದು ಪ್ರಯಾಣ :** ಘಟಪ್ರಭಾ ನದಿಯ ಪ್ರವಾಹದಿಂದ ಢವಳೇಶ್ವರ, ಮಿರ್ಜಿ, ನಂಧಗಾಂವ ಸೇತುವೆಗಳು ಕಳೆದ 10–12 ದಿನಗಳಿಂದ ಜಲಾವೃತವಾಗಿರುವ ಕಾರಣ ಬೆಳಗಾವಿ ಗಡಿಜಿಲ್ಲೆಯ ಮೂಡಲಗಿ ತಾಲೂಕಿಮ ಹತ್ತಾರು ಗಡಿ ಗ್ರಾಮಗಳಿಗೆ ಹೋಗುವವರು ಕೊಣ್ಣೂರ–ಗೋಕಾಕ, ಮುಧೋಳ–ಲೋಕಾಪೂರ ಮಾರ್ಗವಾಗಿ 70–80 ಕೀಮಿ ಸುತ್ತುವರೆದು ಸಂಚರಿಸಬೇಕಾದ ಅನಿವಾರ್ಯತೆ ಉಂಟಾಗಿದೆ.

# ನಿಗದಿತ ಸಮಯಕ್ಕೆ ಬಾರದ ಬಸ್‌ಗಳು, ವಿದ್ಯಾಭ್ಯಾಸಕ್ಕೆ ತೊಂದರೆ ಹೆಚ್ಚುವರಿ ಬಸ್ ಓಡಿಸಲು ಆಗ್ರಹಸಿ ಬೃಹತ್ ಪ್ರತಿಭಟನೆ





**ಜಮಖಂಡಿ :** ನಿಗದಿತ ಸಮಯಕ್ಕೆ ಬಸ್‌ಗಳು ಬರುತ್ತಿಲ್ಲ. ಇದರಿಂದ ಶಾಲಾ ಕಾಲೇಜುಗಳಿಗೆ ಸಮಯಕ್ಕೆ ಸರಿಯಾಗಿ ತೆರಳಲು ಸಾಧ್ಯವಾಗುತ್ತಿಲ್ಲ. ಕೂಡಲೇ ಈ ಭಾಗದಲ್ಲಿ ಹೆಚ್ಚಿನ ಬಸ್ ಸಮರ್ಪಕ ಸಂಚಾರ ನಿಗದಿತ ಸಮಯದಲ್ಲಿ ಬಸ್ ಓಡಾಟ ಕಲ್ಪಿಸಿಕೊಡಬೇಕೆಂದು ಆಗ್ರಹಿಸಿ ವಿದ್ಯಾರ್ಥಿಗಳು ತಾಲೂಕಿನ ಚಿಕ್ಕಲಕಿ ಕ್ರಾಸದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು. ಶಾಲಾ, ಕಾಲೇಜುಗಳ ನೂರಾರು ವಿದ್ಯಾರ್ಥಿಗಳು ರಸ್ತೆಗಿಳಿದು ಬಸ್ ಸಂಚಾರದ ಅವ್ಯವಸ್ಥೆ ವಿರೋಧಿಸಿ ಧಿಕ್ಕಾರ ಕೂಗಿ ಪ್ರತಿಭಟನೆ ನಡೆಸಿದರು. ನಡುರಸ್ತೆಯಲ್ಲಿ ಧರಣಿ ಕೈಗೊಂಡು ಪ್ರತಿಭಟಿಸಿದರು. ಬೆಳಿಗ್ಗೆಯಿಂದ ವಿಜಯಪುರ ಹಾಗೂ ಜಮಖಂಡಿ ಮೂಲಕ ವಿವಿಧೆಡೆ ತೆರಳುತ್ತಿದ್ದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಹಲವಾರು ಬಸ್‌ಗಳನ್ನು ಮಧ್ಯಾಹ್ನದವರೆಗೆ ಪ್ರತಿಭಟನಾಕಾರರು ತಡೆಗಟ್ಟಿದರು.

ಸಾವಳಗಿ ಪೋಲೀಸ್ ಠಾಣೆ ಪಿಎಸ್.ಐ ತಮ್ಮ ಪೋಲೀಸ್ ಸಿಬ್ಬಂದಿಯವರು ಪ್ರತಿಭಟನಾ ವಿದ್ಯಾರ್ಥಿಗಳ ಅಹವಾಲು ಆಲಿಸಿದರು. ಬಸ್‌ಗಳನ್ನು ತಡೆದು ರಸ್ತೆ ಮೇಲೆ ಪ್ರತಿಭಟನೆ ಮಾಡುವುದರಿಂದ ಪ್ರಯಾಣಿಕರಿಗೆ, ಸಾರ್ವಜನಿಕರಿಗೆ ತೊಂದರೆಯಾಗುತ್ತದೆ. ಬಸ್‌ಗಳ ಸಂಚಾರಕ್ಕೆ ಆರಂಭಕ್ಕೆ ಮನವೊಲಿಸಲು ಪ್ರಯತ್ನಿಸಿದರು. ಆದರೆ ಪ್ರತಿಭಟನಾಕಾರರು ಸ್ಥಳಕ್ಕೆ ಜಮಖಂಡಿ ಘಟಕ ವ್ಯವಸ್ಥಾಪಕರು ಆಗಮಿಸುವರೆಗೆ ಹಿಂದೆ ಸರಿಯುವುದಿಲ್ಲ. ತಮ್ಮ ಬೇಡಿಕೆಗಳನ್ನು ಒಂದೆರಡು ದಿನಗಳಲ್ಲಿ ಈಡೇರಿಸುವ ಲಿಖಿತ ಭರವಸೆ ನೀಡುವರೆಗೆ ಇಲ್ಲಿಂದ ಕದಲುವುದಿಲ್ಲವೆಂದು ಬಿಗಿಪಟ್ಟು ಹಿಡಿದರು. ಪೋಲೀಸರು ಬಹುಹೊತ್ತಿನವರೆಗೆ ಮನವೊಲಿಸುವ ಕಸರತ್ತು ನಡೆಸಿದರು ಫಲಕರಿಸಲಿಲ್ಲ.

ಪ್ರತಿನಿತ್ಯ ಬೆಳಿಗ್ಗೆ 7 ರಿಂದ 8–30 ರವರೆಗೆ ಚಿಕ್ಕಲಕಿ ಕ್ರಾಸದಿಂದ ಜಮಖಂಡಿಗೆ ಕನಿಷ್ಠ 3 ಬಸ್‌ಗಳನ್ನು ಬಿಡಬೇಕು. ಚಿಕ್ಕಲಕಿ ಕ್ರಾಸ ಮೂಲಕ ಸಂಚರಿಸುವ ಎಲ್ಲ ಬಸ್‌ಗಳಲ್ಲಿ ವಿದ್ಯಾರ್ಥಿಗಳಿಗೆ (ಪಾಸ್) ಪ್ರವೇಶ ಅವಕಾಶ ನೀಡಬೇಕು. ಇಲ್ಲದಿದ್ದರೆ ಮತ್ತೆ ವಿದ್ಯಾರ್ಥಿಗಳು ಉಗ್ರಸ್ವರೂಪದ ಹೋರಾಟಕ್ಕೆ ಇಳಿಯುವುದು ಅನಿವಾರ್ಯವಾದೀತು ಎಂದು ಪ್ರತಿಭಟನಾಕಾರರು ಎಚ್ಚರಿಸಿದರು.

ಬೆಳಿಗ್ಗೆಯಿಂದ ಮಧ್ಯಾಹ್ನವರೆಗೆ ನಡೆದ ವಿದ್ಯಾರ್ಥಿಗಳ ಪ್ರತಿಭಟನೆಯಲ್ಲಿ ನಿಮಿತ್ತ ಸಂಚಾರ ಸ್ಥಗಿತಗೊಂಡ ಹಿನ್ನಲೆಯಲ್ಲಿ ಬೆಳಗಾವಿ ವಿಜಯಪೂರ ರಾಜ್ಯಹೆದ್ದಾರಿಯಲ್ಲಿ ವಾಹನಗಳು ಸಾಲುಸಾಲಾಗಿ ನಿಂತುಕೊಂಡಿದ್ದವು.

ವಿ.ಎ.ಚವ್ಹಾಣ, ಜೆ.ಎನ್.ಸಾಳುಂಕೆ, ಎಸ್.ಎ.ಬಿರಾದಾರ, ಎಲ್.ವಿ.ಕದಮ, ಎ.ಎಂ.ಮೋರೆ, ಪ್ರದೀಪ ಮಡಕಿ, ಪುಂಡಲೀಕ ಗೋಠೆ, ಪಿ.ಆರ್.ಭೋಸಲೆ, ಎನ್.ಎಸ್.ಬಮನಾಳ, ಆರ್.ಎಂ.ದೊಡಮನಿ, ಎಸ್.ಟಿ.ಕೊಣ್ಣೂರ ಸಹಿತ ವಿದ್ಯಾರ್ಥಿಗಳು, ವಿವಿಧ ಸಂಘಟನೆಗಳ ಪ್ರಮುಖರು ಇದ್ದರು.

# ಸಂತ್ರಸ್ಥರ ಜಾನುವಾರಗಳಿಗೆ ತಾಲೂಕಾಡಳಿತ ಮೇವು ವಿತರಣೆ



**ಜಮಖಂಡಿ :** ಕೃಷ್ಣಾನದಿ ಭೀಕರ ಪ್ರವಾಹದಿಂದ ತಾಲೂಕಿನ ಮುತ್ತೂರ ನಡುಗಡ್ಡೆಯಿಂದ ಕುಟುಂಬಗಳನ್ನು ಮತ್ತು ಜಾನುವಾರಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಗೊಳಿಸಲಾಗಿದ್ದು, ಕಾಳಜಿ ಕೇಂದ್ರದಲ್ಲಿರುವ ಜಾನುವಾರುಗಳಿಗೆ ತಾಲೂಕಾಡಳಿತದಿಂಧ ಮೇವು ವಿತರಿಸಲಾಯಿತು.

ಪ್ರವಾಹಪೀಡಿತ ಸಂತ್ರಸ್ಥರ ನೂರಾರು ಜಾನುವಾರುಗಳಿಗೆ ಪಶುವೈದ್ಯಾಧಿಕಾರಿಗಳು, ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿ, ಗ್ರಾಮಲೆಕ್ಕಾಧಿಕಾರಿ ಮತ್ತು ಗ್ರಾಮ ಪಂಚಾಯತ ಸದಸ್ಯರ ನೇತೃತ್ವದಲ್ಲಿ ಮೇವು ವಿತರಿಸಲಾಯಿತು.

ಇದೇ ಸಂದರ್ಭದಲ್ಲಿ ಪ್ರವಾಹ ನಿಯಂತ್ರಣ ನೊಡಲ್ ಅಧಿಕಾರಿ ಜಯಶ್ರೀ ಸವದಿ; ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಕೆಂಪನ್ನವರ, ಪಶು ವೈದ್ಯಾಧಿಕಾರಿ ಯಲ್ಲಪ್ಪ ಅಥಣಿ, ಗ್ರಾಮ ಲೆಕ್ಕಾಧಿಕಾರಿ ಜಿ.ಎಸ್.ಹಿರೇಮಠ ಗ್ರಾ.ಪಂ. ಕಾರ್ಯದರ್ಶಿ ಶ್ರೀಶೈಲ ಹಳ್ಳಿ, ಸದಸ್ಯರಾದ ನಾಗೇಶ ಹಿಪ್ಪರಗಿ, ಸದಾಶಿವ ಕಾಂಬಳೆ, ರಾಜು ಕುರಿ, ಶಿವಪುತ್ರಪ್ಪ, ಕಲ್ಮೇಶ್ವರ ಕೊಳ್ಳಿ ಸಹಿತ ಹಲವರು ಇದ್ದರು.

# ವಿದ್ಯಾರ್ಥಿಗಳು ದುಶ್ಚಟಗಳಿಂದ ದೂರವಿರಿ: ಚಂದ್ರಶೇಖರ ಮೋರೆ



**ಮಹಾಲಿಂಗಪುರ :** ಪ್ರೌಢಶಾಲೆಯ ಮೂರು ವರ್ಷಗಳ ಶೈಕ್ಷಣೀಕ ಹಂತದಲ್ಲಿರುವ ವಿದ್ಯಾರ್ಥಿಗಳು ಯಾವುದೇ ದುಶ್ಚಟಗಳಿಂದ ದೂರವಿದ್ದು, ವಿದ್ಯಾರ್ಥಿ ಜೀವನವನ್ನು ಸದುಪಯೋಗಮಾಡಿಕೊಳ್ಳಬೇಕೆಂದು ಸ್ಥಳೀಯ ಸಿದ್ದಾರೂಢ ಬ್ರಹ್ಮವಿದ್ಯಾಶ್ರಮದ ಕಾರ್ಯದರ್ಶಿ, ಪತ್ರಕರ್ತ ಚಂದ್ರಶೇಖರ ಮೋರೆ ಹೇಳಿದರು.

ಗುರುವಾರ ಪಟ್ಟಣದ ಸರ್ಕಾರಿ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡಿದ್ದ ವ್ಯಸನಮುಕ್ತ ದಿನಾಚರಣೆ ಕಾರ್ಯಕ್ರಮದ ಉಪನ್ಯಾಸಕರಾಗಿ ಮಾತನಾಡಿದ ಅವರು ಮಕ್ಕಳಿಗೆ ಸಂಸ್ಕಾರದ ಕೊರತೆಯಿಂದಾಗಿ ವಿದ್ಯಾರ್ಥಿಗಳು, ತರುಣರು ದುಶ್ಚಟಗಳಿಗೆ ಬಲಿಯಾಗಿ ಅಮೂಲ್ಯವಾದ ಬದುಕನ್ನು ಹಾಳು ಮಾಡಿಕೊಳ್ಳುತ್ತಿರುವದು ವಿಷಾದನೀಯ. ವಿದ್ಯಾರ್ಥಿಗಳು ತಂದೆ, ತಾಯಿ, ಗುರುಗಳಿಗೆ ವಿದೇಯರಾಗಿ ಸದಾ ಚಿಂತನಶೀಲ, ಕ್ರೀಯಾಶೀಲರಾಗಿ ವ್ಯವಸಮುಕ್ತ ಬದುಕನ್ನು ರೂಪಿಸಿಕೊಂಡು ಪಾಲಕರ, ಮನೆತನದ, ಊರಿನ ಕೀರ್ತಿ ಹೆಚ್ಚಿಸುವ ಮಾದರಿ ಮಕ್ಕಳಾಗಿ ಬೆಳೆಯಬೇಕು ಎಂದರು.

ಅಧ್ಯಕ್ಷತೆವಹಿಸಿದ್ದ ಶಾಲೆಯ ಮುಖ್ಯಗುರು ಧನಂಜಯ ಕುಲಕರ್ಣಿ ಮಾತನಾಡಿ ವಿದ್ಯಾರ್ಥಿಗಳು ಶೈಕ್ಷಣೀಕ ಜೀವನದಲ್ಲಿ ಯಾವುದೇ ದುಶ್ಚಟಗಳಿಗೆ ಬಲಿಯಾಗಬಾರದು, ಮುಖ್ಯವಾಗಿ ಮೋಬೈಲ, ಟಿವ್ಹಿ, ಸಾಮಾಜಿಕ ಜಾಲತಾಣಗಳಿಂದ ದೂರವಿದ್ದು, ಶಿಕ್ಷಕರು, ಪಾಲಕರಿಗೆ ವಿಧೇಯರಾಗಿದ್ದು ವಿದ್ಯಾರ್ಥಿ ಜೀವನವನ್ನು ಬಂಗಾರದ ಜೀವನವನ್ನಾಗಿ ರೂಪಿಸಿಕೊಂಡು ಭವಿಷ್ಯದಲ್ಲಿ ಸಮಾಜದ ಉತ್ತಮ ಪ್ರಜೆಗಳಾಗಿ ರೂಪಗೊಳ್ಳಬೇಕು ಎಂದರು.

ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಸಂಜಯ ರಾಠೋಡ, ಪುರಸಭೆ ಸದಸ್ಯ ಚನ್ನಬಸು ಯರಗಟ್ಟಿ, ಇಂಗ್ಲೀಷ್ ಶಿಕ್ಷಕ ಎಸ್.ಎಲ್.ಕಂಬಾರ ಪ್ರಾಸ್ತಾವಿಕವಾಗಿ ಮಾತನಾಡಿ, ಕಾರ್ಯಕ್ರಮ ನಿರೂಪಿಸಿದರು.

ವ್ಯಸನ ಮುಕ್ತ ದಿನಾಚರಣೆ ಪ್ರಯುಕ್ತ ಇಳಕಲ್ ಮಹಾಂತ ಸ್ವಾಮಿಗಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಮಕ್ಕಳಿಗೆ ಮಧ್ಯಪಾನ, ಮಾದಕ ವಸ್ತು, ತಂಬಾಕು ವಸ್ತುಗಳ ವ್ಯಸನ ಮುಕ್ತಗೊಳಿಸುವ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಶಾಲೆಯ ಸಹಶಿಕ್ಷಕರಾದ ಶ್ರೀಮತಿ ಎನ್.ಬಿ.ಬೇಟಗೇರಿ, ಶ್ರೀಮತಿ ಬಿ.ಎಸ್.ಜಿರಲಿ, ಶ್ರೀಮತಿ ಆರ್.ಸಿ.ಜಾಲಿಗಿಡದ, ಶ್ರೀಮತಿ ಪಿ.ಎ.ಖಾನವಿಲಕರ, ಶ್ರೀಮತಿ ಎಂ.ಜಿ.ಅಲ್ಲಾಖಾನ, ಶ್ರೀಮತಿ ಆರ್.ಎಸ್.ಬೀಳಗಿ ಸೇರಿದಂತೆ ಹಲವರು ಇದ್ದರು.

# ನದಿಗೆ ಹೆಚ್ಚುವರಿ ನೀರು ಬಂದರೆ ರಾಜ್ಯ ಹೆದ್ದಾರಿ ಸ್ಥಗಿತ ತಾಲೂಕಿನ ಚಿಕ್ಕಪಡಸಲಗಿ ಸೇತುವೆ ಕೆಳಗೆ ಜಲವೈಭವ..!



**– ಮಲ್ಲೇಶ ರಾ. ಆಳಗಿ**

**ಜಮಖಂಡಿ:** ತಾಲೂಕಿನ ಚಿಕ್ಕಪಡಸಲಗಿ ಗ್ರಾಮದ ಸನಿಹಹರಿಯುತ್ತಿರುವಕೃಷ್ಣಾನದಿಯಲ್ಲಿಮಂಗಳವಾರ ಸಂಜೆ ಜಲರಾಶಿಯ ವ್ಯಯಾರ ಬಲುಜೋರಾಗಿದ್ದು, ಶ್ರಮಬಿಂದು ಸಾಗರ ನೀರಿನಿಂದ ತುಂಬಿತುಳುಕುತ್ತಿದೆ. ವಿಜಯಪುರ–ಜಮಖಂಡಿ ಮಧ್ಯೆ ಸಂಪರ್ಕ ಕಲ್ಪಿಸವ ಹಳೆಯದಾದ ಈ ಸೇತುವೆ ಕೆಳಗೆ ಈಗ ಜಲ ವೈಭವದ ಮೋಹಕ ನೋಟ ಗಮನ ಸೆಳೆಯುತ್ತಿದೆ.

ಅಪಾರ ಪ್ರಮಾಣದ ನೀರು ಕೃಷ್ಣಾನದಿಯಲ್ಲಿ ಕಂಗೊಳಿಸುತ್ತಿದೆ. ಸೇತುವೆ ಕೆಳಗೆ ನೀರಿನ ಅಲೆಗಳ ಸದ್ದು ಕ್ಷಣ ಕ್ಷಣವೂ ಹೆಚ್ಚಾಗಿದೆ. ಸೇತುವೆ ಮೇಲೆ ನೀರು ಬರಲು ಇನ್ನೂ ಭಾಗಶಃ 2.5 ಅಡಿ ಮಾತ್ರ ಬಾಕಿಯಿದೆ. ರಭಸದಿಂದ ಹರಿಯುತ್ತಿರುವ ನೀರಿನ ಅಲೆಗಳು ಪುಟಿದೆದ್ದು ಸೇತುವೆಗೆ ಅಪ್ಪಳಿಸುತ್ತಿದೆ. ಸೇತುವೆ ಮೇಲೆ ಜಲ ಸಿಂಚನದ ಹನಿಗಳ ಚಿತ್ತಾರ ಅಗಾಗ ಮೂಡಿ ಬರುತ್ತಿದ್ದು ನೋಡುಗರ ಕಣ್ಮನ ಹಸಿಗೊಳಿಸಿ ಉಲ್ಲಾಸಮಯದಿಂದ ತೆಲುವಂತೆ ಮಾಡುತ್ತಿದೆ. ಗ್ರಾಮದ ಜಲಪ್ರೇಮಿಗಳು ಖುಷಿಯಿಂದ ಸೇತುವೆಯತ್ತ ತೆರಳಿ ಜಲರಾಶಿ ವೈವಿಧ್ಯಮಯ ದೃಶ್ಯ ಕಾವ್ಯವನ್ನು ತಮ್ಮ ಕಂಗಳಲ್ಲಿ ಸೆರೆ ಹಿಡಿದು ಸಂತಸದಿಂದ ನಿಟ್ಟುಸಿರು ಬಿಡುತ್ತಿದ್ದಾರೆ. ಅಬ್ಬಬ್ಬಾ ಏನಿದು ಮುಂಗಾರು ಹಂಗಾಮಾದ ಜಲ ಸೊಗಡಿನ ಲೀಲೆ? ಕೃಷ್ಣೆ ಒಡಲಿನಲ್ಲಿ ಚಿಮ್ಮುತ್ತಿರುವ ಹೊಸ ನೀರಿನ ಸಿಂಗಾರ ಭರಿತ ಅಬ್ಬರ ಅಂತ ಹರಿಯುತ್ತಿರುವ ಹೊಸ ನೀರಿನ ಕಳೆ, ಸೆಳೆಗೆ ಮೂಕ ವಿಸ್ಮಯರಾಗಿ ಫಿದಾಗೊಂಡಿದ್ದಾರೆ. ಮನದಲ್ಲಿ ಈ ಜಲರೂಪದ ಸಮೃದ್ಧಿ ಹರುಷದಿಂದ ಮೇಳೈಸಿಕೊಂಡಿದ್ದಾರೆ. ಮೈದುಂಬಿಕೊಂಡ ಕೃಷ್ಣೆಯ ಒಡಲಿನ ಜಲಪರಿಯ ಗುಣಗಾನ ನಡೆಯುತ್ತಿದೆ.

ಕೃಷ್ಣಾನದಿಗೆ ಹೆಚ್ಚುವರಿಯಾಗಿ ಇನ್ನೂ 30 ಸಾವಿರ ಕ್ಯೂಸೆಸ್ ನೀರು ಹರಿದು ಬಂದರೇ ಬೆಳಗಾವಿ–ವಿಜಯಪೂರ ರಾಜ್ಯ ಹೆದ್ದಾರಿ ವಾಹನ ಸಂಚಾರ ಸ್ಥಗಿತಗೊಳ್ಳಲಿದೆ. ಯಾವುದೇ ರೀತಿ ಅಹಿತಕರ ಘಟನೆ ಸಂಭವಿಸದಂತೆ ತಾಲೂಕಾಡಳಿತ ಮತ್ತು ಪೊಲೀಸ ಇಲಾಖೆ ಕಟ್ಟೆಚ್ಚರ ವಹಿಸಬೇಕಾಗಿದೆ. ಮೊಬೈಲದಲ್ಲಿ ಮನೋಹರ ದೃಶ್ಯ ಸೆರೆ ಹಿಡಿದುಕೊಳ್ಳುವ ಜನರನ್ನು ನಿಯಂತ್ರಿಸಬೇಕಾಗಿದೆ.

ಮಂಗಳವಾರ ಕೃಷ್ಣಾನದಿಗೆ 3.5 ಲಕ್ಷ ಕ್ಯೂಸೆಸ್ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದ್ದು, ನೆರೆ ರಾಜ್ಯದಲ್ಲಿ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದ ಹೆಚ್ಚುವರಿಯಾಗಿ 30 ಸಾವಿರ ಕ್ಯೂಸೆಸ್ ನೀರು ಹರಿದು ಬಂದರೇ ಬೆಳಗಾವಿ–ವಿಜಯಪೂರ ಹೆದ್ದಾರಿ ಸ್ಥಗಿತಗೊಳ್ಳಲಿದೆ.

ಜಲ ಪ್ರೇಮಿಗಳಾದ ಬಸವರಾಜ ಅನಂತಪುರ, ಈರಣ್ಣ ದೇಸಾಯಿ ಇಂದು ಮಂಗಳವಾರ ಸಂಜೆ ದೂರದಿಂದಲೇ ಕೃಷ್ಣಾನದಿ ಸೇತುವೆ ಕೆಳಗೆ ಹರಿಯುತ್ತಿರುವ ಜಲ ನರ್ತನದ ರಮಣೀಯ ದೃಶ್ಯಗಳನ್ನು ತಮ್ಮ ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದಾರೆ.

# ದಶಕಗಳ ಹಿಂದಿನ ಸಮಸ್ಯೆಗೆ ಇಂದಿಗೂ ಪರಿಹಾರ ಸಿಕ್ಕಿಲ್ಲ





**ಜಮಖಂಡಿ :** ತಾಲೂಕಿನ ಕೃಷ್ಣಾನದಿ ತೀರದಲ್ಲಿರುವ ಮುತ್ತೂರ ಗ್ರಾಮದ ಮುತ್ತೂರ ನಡುಗಡ್ಡೆ ದಶಕಗಳ ಹಿಂದಿನ ಸಮಸ್ಯೆಗೆ ಇಂದಿಗೂ ಪರಿಹಾರ ಲಭಿಸದೇ ಮಳೆಗಾಲದಲ್ಲಿ ಕೃಷ್ಣಾನದಿ ಪ್ರವಾಹ ಸಂದರ್ಭದಲ್ಲಿ ಸಿಲುಕಿ ನರಳಾಡುವ ಪರಿಸ್ಥಿತಿಯಿದೆ. ನಡುಗಡೆ ಸಹಿತ ಮುತ್ತೂರ ಗ್ರಾಮಕ್ಕೂ ನೀರು ಸುತ್ತುವರೆದಿದೆ.

ದಶಕಗಳ ಹಿಂದೆ ಆಲಮಟ್ಟಿ 519.4 ಮೀಟರ್ ಹಿನ್ನೀರು ನಿಲ್ಲುಗಡೆ ಸಲುವಾಗಿ ಅಂದಿನ ಸರಕಾರ ನಡೆಸಿದ ಸರ್ವೆ ಸಂದರ್ಭದಲ್ಲಿ ಅಧಿಕಾರಿಗಳ ನಿರ್ಲಕ್ಷದಿಂದ ಅಂದಾಜು 200 ಹೆಕ್ಟರ್ ಪ್ರದೇಶ ಜಮೀನು ಮುಳಗಡೆ ಪಟ್ಟಿಯಲ್ಲಿ ಸೇರಿಸದ ಅಧಿಕಾರಿಗಳಿಂದ ಇಂದು ಪ್ರತಿವರ್ಷ ಪ್ರವಾಹ ತೊಂದರೆ ಎದುರಿಸುತ್ತಿದ್ದಾರೆ. ಪ್ರತಿವರ್ಷ ತಾಲೂಕಾಡಳಿತ ಮತ್ತು ಅಲ್ಲಿನ ನಿವಾಸಿಗಳ ನಡುವೆ ವಾಕ್ಸಮರ ಇದ್ದೇಇದೆ. ನದಿಗೆ ಕನಿಷ್ಠ 2.50ಲಕ್ಷ ಕ್ಯೂಸೆಸ್ ನೀರು ಬರುವವರೆಗೆ ಅಲ್ಲಿನರೈತರುಸುರಕ್ಷಿತಸ್ಥಳಗಳಿಗೆಹೋಗಲು ಇಂದಿನವರೆಗೂ ನಿರಾಕರಿಸುತ್ತಾರೆ. ಆದರೇ ಅಧಿಕಾರಿಗಳು ಮಾತ್ರ ಸುರಕ್ಷಿತ ಸ್ಥಳಕ್ಕೆ ತೆರಳುವಂತೆ ಒತ್ತಡ ಹೇರುತ್ತಾರೆ. ನಮಗೆ ಶಾಶ್ವತ ಪರಿವಾರ ನೀಡಿದರೇ ಮಾತ್ರ ಇಲ್ಲಿಂದ ತೆರವುದಾಗಿ ಹಠಹಿಡಿದು ಕುಳಿತರು ತಾಲೂಕಾಡಳಿತ ಪ್ರತಿವರ್ಷ ಭರವಸೆ ನೀಡುವ ಸ್ಥಳಾಂತರಿಸುವ ಕೆಲಸ ಪ್ರತಿ ವರ್ಷ ನಡೆಯುತ್ತಿದೆ.

ಜಮಖಂಡಿತಾಲೂಕುಬೇಸಿಗೆಯಲ್ಲಿಭೀಕರ ಬರಗಾಲ ಎದುರಿಸಿದರೇ, ಮಳೆಗಾಲದಲ್ಲಿ ಭೀಕರ ಪ್ರವಾಹ ಸ್ಥಿತಿ ಎದುರಿಸುತ್ತಿದೆ. ಕೃಷ್ಣಾ ಮೇಲ್ದಂಡೆ ಇಲಾಖೆಯಿಂದ 524.5 ಮೀಟರ ನೀರು ಸಂಗ್ರಹ ಸಾಮರ್ಥ್ಯದ ಮೂರನೇಯ ಹಂತದ ಯೋಜನೆಯಲ್ಲಿ ಫಲಾನುಭವಿಗಳಿಗೆ ಪರಿಹಾರ ಹಂಚಿಕೆ ಆಗುವರೆಗೂ ಪ್ರತಿವರ್ಷ ಈ ಸಮಸ್ಯೆ ಇರಲಿದೆ. ರಾಜಕೀಯ ನಾಯಕರು, ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ಇಚ್ಛಾಶಕ್ತಿ ಕೊರತೆಯಿಂದ ರೈತರಿಗೆ ಅನ್ಯಾಯ ಆಗುತ್ತಿದೆ.

**ಅಪಾಯಮಟ್ಟ ಮೀರಿದ ಕೃಷ್ಣೆ......**

ಹಿಪ್ಪರಗಿ ಜಲಾಶಯದಲ್ಲಿ ರವಿವಾರ ಕೃಷ್ಣಾನದಿಗೆ 3.5 ಲಕ್ಷ ಕ್ಯೂಸೆಸ್ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದ್ದು ಅಪಾಯದಮಟ್ಟ ಮೀರಿದ ಪ್ರಮಾಣದಲ್ಲಿ ನದಿಗೆ ಬರುತ್ತಿರುವ ನೀರನ್ನು 22 ಗೇಟಗಳ ಮೂಲಕ್ಷದೇ ಪ್ರಮಾಣ ದಲ್ಲಿ ಆಲಮಟ್ಟಿ ಜಲಾಶಯಕ್ಕೆ ನೀರು ಬಿಡಲಾಗುತ್ತಿದೆ. ಪ್ರವಾಹ ಭೀತಿ ಎದುರಿಸುತ್ತಿರುವ ಮೂಲಕ ತಾಲೂಕಿನ ಮೂತ್ತೂರ ಗ್ರಾಮದಲ್ಲಿ ಕಾಳಜಿ ಕೇಂದ್ರ ಆರಂಭಿಸಲಾಗಿದೆ.


ಕಾಳಜಿ ಕೇಂದ್ರದಲ್ಲಿ ಈಗಾಗಲೇ 40 ಕುಟುಂಬದ 200ಕ್ಕೂ ಹೆಚು ಜನರು ಮತ್ತು 100ಕ್ಕೂ ಹೆಚ್ಚು ಜಾನುವಾರಗಳನ್ನು ಸ್ಥಳಾಂತರಿಸಲಾಗಿದೆ. ಕೆಲ ಕುಟುಂಬಗಳು ಕಾಳಜಿ ಕೇಂದ್ರದಲ್ಲಿ ವಾಸಿಸುತ್ತಿದ್ದು ಉಳಿದ ರೈತರು ಸಹೋದರ ಮನೆಗೆ, ಬಿಗರ ಮನೆಗಳಲ್ಲಿ ವಾಸವಾಗಿದ್ದಾರೆ. ಸತತ ಮಳೆಯಿಂದ ತಾಲೂಕಿನಲ್ಲಿ 3 ಮನೆಗಳು ಕುಸಿದಿವೆ. ಗ್ರಾಮೀಣ ಭಾಗದಲ್ಲಿ 1850 ಹೆಕ್ಟರ ಕೃಷಿ ಬೆಳೆ ನಾಶಗೊಂಡಿದೆ.

# ಹಳಿಂಗಳಿಯಲ್ಲಿಯೂ ನೂರಾರು ಎಕರೆ ಬೆಳೆ ನೀರಲ್ಲಿ









**ತೇರದಾಳ :** ಕೃಷ್ಣಾ ನದಿ ದಡದ ಹಳಿಂಗಳಿ ಗ್ರಾಮದಲ್ಲಿಯೂ ಪ್ರವಾಹ ಮುಂದುವರೆದಿದ್ದು, ಗುರುವಾರ ಒಂದು ಅಡಿಯಷ್ಟು ನೀರು ಹೆಚ್ಚಳ ಕಂಡು ಬಂದಿದೆ. ಇದರಿಂದ ನದಿಗೆ ಹೊಂದಿಕೊಂಡಿರುವ ನೂರಾರು ಎಕರೆ ಜಮೀನಿನಲ್ಲಿನ ಬೆಳೆಗಳು ನೀರಲ್ಲಿ ಮುಳಗಿವೆ. ತೋಟದ ವಸತಿಯ ಗುಡಿಸಲುಗಳಿಗೂ ನೀರು ನುಗ್ಗುತ್ತಿದ್ದು, ರೈತರಿಗೆ ದಿಕ್ಕು ತೋಚದಂತಾಗಿದೆ. ಇನ್ನೂ ಗ್ರಾಮದ ಗುಳ್ಳಿಮಳ್ಳಿಯಲ್ಲಿನ ಕುಟುಂಬಗಳು ಮಹಾವೀರ ಶಾಲೆಯಲ್ಲಿನ ಕಾಳಜಿ ಕೇಂದ್ರದಲ್ಲಿದ್ದು, ಸಂತ್ರಸ್ತರಿಗೆ ಊಪ–ಉಪಚಾರ ಅಧಿಕಾರಿಗಳಿಂದ ನಡೆಯುತ್ತಿದೆ. ತಲೆ, ಮೈ ಕೈನೋವು, ಜ್ವರ, ಕೆಮ್ಮುಗಳಂತಹ ರೋಗಗಳು ಕಾಣಿಸಿಕೊಳ್ಳುತ್ತಿದ್ದು, ಆಶಾ ಹಾಗೂ ಆಸ್ಪತ್ರೆ ಸಿಬ್ಬಂದಿ ಮಾತ್ರೆಗಳನ್ನು ವಿತರಿಸುತ್ತಿದ್ದಾರೆ.

ಹಳಿಂಗಳಿ ಗ್ರಾಮದಲ್ಲಿ 2600ರಷ್ಟು ಜಾನುವಾರಗಳಿದ್ದು, ಪ್ರತಿದಿನ 50 ಟನ್ ಮೇವು ಬೇಡಿಕೆ ಇದೆ. ಬೇಡಿಯಷ್ಟು ಮೇವು ಪೂರೈಕೆ ಆಗದ ಕಾರಣ ನೋಡಲ್ ಅಧಿಕಾರಿ ಚೇತನ ಅಬ್ಬಿಗೇರ, ಪಿಡಿಒ ತೇಜಶ್ವಿನಿ ಮರೆಗುದ್ದಿ, ಗ್ರಾಮದ ಮುಖಂಡರನ್ನು ವಿಶ್ವಾಸಕ್ಕೆ ತಗೆದುಕೊಂಡು ಯಾವುದೆ ತೊಂದರೆ ಆಗದಂತೆ ಮೇವು ವಿತರಣೆ ಮಾಡುತ್ತಿದ್ದಾರೆ. ಮುಂದೆ ಬರುತ್ತಿಲ್ಲ–ತಮದಡ್ಡಿ ಗ್ರಾಮದಲ್ಲಿ ಮಂಗಳವಾರ ಮೇವು ವಿತರಣೆ ವೇಳೆ ಗಲಾಟೆ ಸಂಭವಿಸಿದ್ದರಿಂದ ತಮದಡ್ಡಿಗೆ ಮೇವು ತಗೆದುಕೊಂಡು ಬರಲು ಯಾರು ಮುಂದೆ ಬರುತ್ತಿಲ್ಲ ಎಂದು ಹೇಳಲಾಗುತ್ತಿದೆ. ಇತ್ತ ಗ್ರಾಮಸ್ಥರು ಮೇವಿಗಾಗಿ ಅಧಿಕಾರಿಗಳೊಂದಿಗೆ ಮಾತಿನ ಸಮರ ನಡೆಸುತ್ತಿರುವುದು ಸಾಮಾನ್ಯವಾಗಿದೆ.

ಇದರ ನಡುವೆ ಅಧಿಕಾರಿಗಳು ಹೈರಾಣ ಆಗುತ್ತಿದ್ದಾರೆ.

# ಮುಂಡಗನೂರದ ವೀಣಾ ಪುರಾಣಿಕಮಠಗೆ ಪಿಎಚ್.ಡಿ ಪ್ರಶಸ್ತಿ




**ಜಮಖಂಡಿ :** ಬೆಳಗಾವಿ ಎಸ್.ಜಿ.ಬಾಳೆಕುಂದ್ರಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಇಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ಇಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕಿ ತಾಲೂಕಿನ ಮುಂಡಗನೂರ ಗ್ರಾಮದ ನಿವಾಸಿ ವೀಣಾ ಪುರಾಣಿಕಮಠ ಮಂಡಿಸಿದ ಡೆವಲಪಮೆಂಟ್ ಆಫ್ ಎನರ್ಜಿ ಎಫಿಸಿಯಂಟ್ ಅಲ್ಗಾರಿದಮ್ಸ್ ಫಾರ್ ಡೇಟಾ ಅಗ್ರಿಗೇಷನ್ ಇನ್ ವೈಯರಲೆಸ್ ಸೆನ್ಸರ್ ನೆಟವರ್ಕ್ ಎಂಬ ಮಹಾಪ್ರಬಂಧಕ್ಕೆ ಪಿ.ಎಚ್.ಡಿ. ಲಭಿಸಿದೆ.

ಡಾ.ಶ್ರೀಧನ ಐಯರ್ ಮಾರ್ಗದರ್ಶನ ನೀಡಿದ್ದಾರೆ. ಸಂಶೋಧನೆ ವೈಯರಲಿಸ್ ರೆನ್ಸರ್ ನೆಟವರ್ಕ್ ಕ್ಷೇತ್ರದಲ್ಲಿ ನೆಟವರ್ಕ್ನಲ್ಲಿ ಪ್ರಮುಖ ಸವಾಲುಗಳನ್ನು ಪರಿಚರಿಸುತ್ತದೆ. ಪ್ರಾಚಾರ್ಯ ಡಾ.ಬಿ.ಆರ್.ಪಟಗುಂದಿ, ಡಾ.ಶಂಕರಗೌಡ ಪಾಟೀಲ ಅಭಿನಂದಿಸಿದ್ದಾರೆ.

# ಎಸ್.ಎಫ್.ಸಿ ಮುಕ್ತನಿಧಿ ಅರ್ಜಿಗಳ ಆಹ್ವಾನ

**ಮೂಡಲಗಿ :** ಪುರಸಭೆಯ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಸನ್23–24 ಮತ್ತು 24–25 ನೇ ಸಾಲಿನ ಎಸ್.ಎಫ್.ಸಿ./ ಪುರಸಭೆ ನಿಧಿಯಡಿ 7.25%ಯೋಜನೆಯಡಿ ವ್ಯಕ್ತಿ ಸಂಬಂಧಿತ ಅನುಕೂಲತೆಗಳನ್ನು ನಳದ ಜೋಡನೆ ಕಲ್ಪಿಸುವ ಸಲುವಾಗಿ ಪುರಸಭೆಯಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು ಇಚ್ಛೆಯುಳ್ಳವರು ಇದೆ ಆಗಸ್ಟ 14 ರೊಳಗಾಗಿ ನಿಗಧಿತ ನಮೂನೆಯಲ್ಲಿ ಅರ್ಜಿಗಳನ್ನು ಭರ್ತಿ ಮಾಡಿ ಪುರಸಭೆ ಕಾರ್ಯಾಲಯಕ್ಕೆ ಸಲ್ಲಿಸಬಹುದಾಗಿದೆ. ವೇಳೆ ಮೀರಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವದಿಲ್ಲಾ ಅಂತಾ ಮುಖ್ಯಾಧಿಕಾರಿ ತುಕಾರಾಮ ಮಾದರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿಜಯಾ ನಾಶಿ ನಿಧನ



**ಮೂಡಲಗಿ :** ಕರೇಮ್ಮಾದೇವಿ ಸರ್ಕಲ ಹತ್ತಿರದ ನಿವಾಸಿ ಕುಮಾರಿ ವಿಜಯಾ ಅಡಿವೇಪ್ಪ ನಾಶಿ (73) ಗುರುವಾರ ನಿಧನರಾದರು.

ಮೃತರು ಇಬ್ಬರು ಅಕ್ಕದಿರು ಇಬ್ಬರು ಸಹೋದರರನ್ನು ಹಾಗೂ ಬಂಧು ಬಳಗವನ್ನು ಅಗಲಿದ್ದಾರೆ,

# ಪ್ರವಾಹ ಕುರಿತು ಉಪವಿಭಾಗಾಧಿಕಾರಿ ಮಾಹಿತಿ
# ಕೃಷ್ಣೆ ಸ್ಥಿರ, ಘಟಪ್ರಭಾ ಇಳಿಮುಖ

**ತೇರದಾಳ :** ಕೃಷ್ಣಾ ನದಿಯಲ್ಲಿ ನೀರಿನ ಮಟ್ಟ ಸ್ಥಿರವಾಗಿದ್ದು, ಘಟಪ್ರಭಾ ನದಿ ಭಾಗದಲ್ಲಿ ನೀರಿನ ಮಟ್ಟ ಇಳಿಮುಖಗೊಂಡಿದೆ ಎಂದು ಜಮಖಂಡಿ ಉಪವಿಭಾಗಾಧಿಕಾರಿ ಶ್ವೇತಾ ಬೀಡಿಕರ ತಿಳಿಸಿದರು.

ಶುಕ್ರವಾರ ಪಟ್ಟಣದ ಪುರಸಭೆಗೆ ಬೇಟಿ ನೀಡಿದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು.

ಕೃಷ್ಣಾ ನದಿಗೆ ಕಲ್ಲೋಳ ಬ್ಯಾರೇಜ್‌ದಿಂದ 2.9 ಲಕ್ಷ ಕ್ಯೂಸೆಕ್ಸ ನೀರು ಹರಿದು ಬರುತ್ತಿದೆ. ಇವತ್ತಿನ ಮಾಹಿತಿ ಪ್ರಕಾರ ಎರಡು ಅಡಿಯಷ್ಟು ನೀರು ಕಡಿಮೆ ಆಗಿದೆ ಎಂದು ಹೇಳಲಾಗುತ್ತಿದೆ. ಆದರೂ ನದಿ ತೀರದ ಗ್ರಾಮಸ್ಥರು ಎಚ್ಚರಿಕೆ ವಹಿಸಬೇಕು. ನದಿಯ ದಡಕ್ಕೆ ಹೋಗುವ ದುಸ್ಸಾಹಸ ಮಾಡಬಾರದು ಎಂದು ಹೇಳಿದ ಎಸಿ, ಘಟಪ್ರಭಾ ನದಿಗೆ ಲೋಳಸೂರ ಬ್ಯಾರೇಜ್‌ದಿಂದ 80 ಸಾವಿರ ಕ್ಯೂಸೆಕ್ಸ



ಬದಲಾಗಿ 50 ಸಾವಿರದಷ್ಟು ಮಾತ್ರ ಹರಿದು ಬರುತ್ತಿದೆ. ನೀರು ಸಂಗ್ರಹಣೆ ಮಾಡುವ ಉದ್ದೇಶದಿಂದ ಸಧ್ಯಕ್ಕೆ ಆಲಮಟ್ಟಿಯಿಂದ 2.5 ಲಕ್ಷ ಕ್ಯೂಸೆಕ್ಸ ಮಾತ್ರ ನೀರು ಹೊರಗೆ ಬಿಡಲಾಗುತ್ತಿದೆ ಎಂದು ಮಾಹಿತಿ ನೀಡಿದರು. ಮುಧೋಳ ತಾಲೂಕಿನಲ್ಲಿ ಸುಮಾರು 12 ಸೇತುವೆಗಳು ಮುಳಗಡೆಗೊಂಡಿದ್ದವು. ಈಗ ಬಹುತೇಕ ಸೇತುವೆಗಳ ಮೇಲಿನ ನೀರು ಸರಿಯುತ್ತಿದೆ. ಯಾದವಾಡ ಸೇತುವೆ ಇನ್ನು ಎರಡು ದಿನದಲ್ಲಿ ಮುಕ್ತಗೊಳ್ಳಬಹುದು. ಜಮಖಂಡಿ ಹಾಗೂ ರಬಕವಿ ಬನಹಟ್ಟಿ ತಾಲೂಕಿನಲ್ಲಿ ಅಂತಹ ಸಮಸ್ಯೆ ಕಂಡು ಬಂದಿಲ್ಲ ಎಂದು ಹೇಳಿದರು. ಮುಧೋಳ ತಾಲೂಕಿನಲ್ಲಿ ಹನ್ನೊಂದು ಹಾಗೂ ರಬಕವಿ ಬನಹಟ್ಟಿ ತಾಲೂಕಿನಲ್ಲಿ ಮೂರು ಕಾಳಜಿ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಎಲ್ಲ ಕಾಳಜಿ ಕೇಂದ್ರಗಳಲ್ಲಿ ಆಸರೆ ಪಡೆದಿರುವವ ಸಂತ್ರಸ್ತರಿಗೆ ಎಲ್ಲ ಸೌಲಭ್ಯ ಒದಗಿಸಲಾಗುತ್ತಿದೆ.

ಜಮೀನು ಮುಳಗಡೆ ಹೊಂದಿದ ರೈತರು ಮಾತ್ರ ತಮ್ಮ ಜಮೀನುಗಳಿಗೆ ಮೇವು ಪಡೆದುಕೊಳ್ಳಬೇಕು. ಅಂತಹ ಜಾನುವಾರಗಳನ್ನು ಅಧಿಕಾರಿಗಳು ಗುರುತಿಸಿದ್ದಾರೆ. ಆದ್ದರಿಂದ ಮೇವಿನ ವಿಚಾರದಲ್ಲಿ ರೈತರು ಸಹಕಾರ ನೀಡಬೇಕೆಂದು ಉಪವಿಭಾಗಾಧಿಕಾರಿ ಶ್ವೇತಾ ಬೀಡಿಕರ ಮನವಿ ಮಾಡಿದ್ದಾರೆ. ತಹಸೀಲ್ದಾರ್ ವಿಜಯಕುಮಾರ ಕಡಕೋಳ, ಗ್ರೇಡ್ 2 ತಹಸೀಲ್ದಾರ್ ಎಸ್.ಬಿ, ಕಾಂಬಳೆ, ಉಪತಹಸೀಲ್ದಾರ್ ಶ್ರೀಕಾಂತ ಮಾಯನ್ನವರ, ಕಂದಾಯ ನಿರೀಕ್ಷಕ ಪಿ.ಆರ್. ಮಠಪತಿ, ಮುಖ್ಯಾಧಿಕಾರಿ ಆನಂದ ಕೆಸರಗೊಪ್ಪ, ಕಚೇರಿ ವ್ಯವಸ್ಥಾಪಕ ಮಲ್ಲಿಕಾರ್ಜುನ ಬಿರಾದಾರ ಪಾಟೀಲ, ಗ್ರಾಮ ಆಡಳಿತಾಧಿಕಾರಿ ರೇವಣಸಿದ್ಧ ಕಾಮತೆ ಇದ್ದರು.

## ಅಧ್ಯಾತ್ಮದ ಸಂದೇಶ ನೀಡಿದ ಸಂತ ನಾಮದೇವರು
# ಮಕ್ಕಳಲ್ಲಿ ಸಂಸ್ಕೃತಿ, ಸಂಸ್ಕಾರ ಬೆಳೆಸಿ



**ರಬಕವಿ–ಬನಹಟ್ಟಿ :** ನಾಮದೇವ ಮಹಾರಾಜರು ಪಾಂಡುರಂಗನ ಪರಮ ಭಕ್ತರಾಗಿ ಅಧ್ಯಾತ್ಮದ ಸಂದೇಶವನ್ನುಸಾರಿದ್ದಾರೆ ಎಂದು ರಬಕವಿ–ಬನಹಟ್ಟಿ ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಚೇತನ ಡಾಗಾ ಹೇಳಿದರು.

ಅವರು ಶುಕ್ರವಾರ ಬನಹಟ್ಟಿಯ ವಿಠ್ಠಲ ಮಂದಿರದಲ್ಲಿ ಶ್ರೀ ಸಂತ ನಾಮದೇವ ಮಹಾರಾಜರ ಪುಣ್ಯತಿಥಿ ಸಮಾರಂಭದ ನಿಮಿತ್ಯ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಹಾಗೂ ಸಾಧಕರಿಗೆ ಸನ್ಮಾನ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದರು. ಮಕ್ಕಳಲ್ಲಿ ಉತ್ತಮ ಶಿಕ್ಷಣದ ಜೊತೆಗೆ ಸಂಸ್ಕೃತಿ, ಸಂಸ್ಕಾರವನ್ನು ಬೆಳೆಸಬೇಕು. ನಾಮದೇವ ಸಿಂಪಿ ಸಮಾಜದವರು ಸಂಘಟನೆಯಿಂದ ಕೆಲಸ ಮಾಡುತ್ತ ಸಮಾಜದಲ್ಲಿ ಉತ್ತಮ ಕೆಲಸಗಳನ್ನು ಮಾಡುತ್ತಾ ಬಂದಿರುವಿರಿ. ಸಂಘಟನೆಯಿಂದ ಹೆಚ್ಚಿನ ಬಲ ದೊರೆಯುತ್ತದೆ. ಮಕ್ಕಳ ಪ್ರತಿಭೆಯನ್ನು ಗುರುತಿಸಿ ಸನ್ಮಾನ ಮಾಡುತ್ತಿರುವುದು ತುಂಬಾ ಹೆಮ್ಮೆಯ ಸಂಗತಿ. ಜೊತೆಗೆ ಸಮಾಜಕ್ಕಾಗಿ ದುಡಿದ ಸಾಧಕರನ್ನು ಗುರುತಿಸಿ ಗೌರವಿಸುತ್ತಿರುವುದು ಅಭಿನಂದನೀಯವಾಗಿದೆ ಎಂದರು.

ಈಸಂದರ್ಭದಲ್ಲಿ ವಿಠ್ಠಲಮಂದಿರದ ಚೇರಮನ್ನರಾದ ಕುಮಾರ ಬಕರೆ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಗಣೇಶ ಬಗಾಡೆ ಆಗಮಿಸಿದ್ದರು. ಸಮಾಜದ ಹಿರಿಯರಾದ ಬಾಲಚಂದ್ರ ಕೋಪರ್ಡೆ, ಸದಾಶಿವ ಗೋಂದಕರ, ಜಯಶ್ರೀ ಗೊಂದಕರ ಅವರನ್ನು ಸನ್ಮಾನಿಸಲಾಯಿತು. ನಂತರ ಶ್ರೀ ಸಂತ ನಾಮದೇವ ಮಹಾರಾಜರ ಪುಣ್ಯತಿಥಿ ನಿಮಿತ್ಯ ಅವರ ಭಾವಚಿತ್ರದ ಮೆರವಣಿಗೆ ನಗರದ ಪ್ರಮುಖ ಬೀದಿಗಳಲ್ಲಿ ಸಡಗರದಿಂದ ನಡೆಯಿತು.

ಕಾರ್ಯಕ್ರಮದಲ್ಲಿ ಮಹಾದೇವ ಭಸ್ಮೆ, ಮಹಾಲಿಂಗ ಹಾಸೀಲಕರ, ನಾಗಪ್ಪ ಬಕರೆ, ಗಂಗಪ್ಪ ಹಾಸೀಲಕರ, ವಿಜಯ ಕೋಪರ್ಡೆ, ಪರಶುರಾಮ ಕೋಪರ್ಡೆ, ಮಾಧವಾನಂದ ಕೋಪರ್ಡೆ, ರಾಮ ಕೋಪರ್ಡೆ, ಗಿರಮಲ್ಲಗೋಂದಕರ, ಶಂಕರಕೋಪರ್ಡೆ, ಬಾಳಕೃಷ್ಣ ಹಾಸೀಲಕರ, ಸಂಜು ಕೋಪರ್ಡೆ, ಮೋಹನ ಹಾಸೀಲಕರ, ವಸಂತ ಭಸ್ಮೆ, ಸುರೇಶ ಕೋಪರ್ಡೆ, ರವಿ ಭಸ್ಮೆ, ನಾಮದೇವ ಗೋಂದಕರ, ಕಿರಣ ಭಸ್ಮೆ, ಸಂಗಪ್ಪ ಕೋಪರ್ಡೆ, ವಿಜಯ ಗೋಂದಕರ, ಪ್ರಭು ಕೋಪರ್ಡೆ, ವಿಠ್ಠಲ ಕೋಪರ್ಡೆ, ಡಾ. ಆನಂದ ಬಕರೆ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

## ರಾಮನಗರ ಹೆಸರು ಬದಲಾವಣೆ ನಿರ್ಯಣ ಕೈ ಬಿಡಿ
# ಶ್ರೀರಾಮ ಸೇನೆ ಹೋರಾಟದ ಎಚ್ಚರಿಕೆ

**ತೇರದಾಳ :** ಅಭಿವೃದ್ಧಿ ನೆಪದಲ್ಲಿ ರಾಮನಗರ ಜಿಲ್ಲೆಯನ್ನು ಬೆಂಗಳೂರು ವ್ಯಾಪ್ತಿಗೆ ಸೇರಿಸುತ್ತಿರುವುದು ಸರಿಯಲ್ಲ. ಅಭಿವೃದ್ಧಿಗೊಳಿಸುವ ಮನಸ್ಸಿದ್ದರೆ ರಾಮನಗರ ಜಿಲ್ಲೆ ಎಂದೇ ಮಾಡಬಹುದು. ದುರುದ್ದೇಶ ಇಟ್ಟುಕೊಂಡು ಬೆಂಗಳೂರು ವ್ಯಾಪ್ತಿಗೆ ಸೇರಿಸುತ್ತಿರುವುದನ್ನು ಶ್ರೀರಾಮ ಸೇನೆ ಬಲವಾಗಿ ಖಂಡಿಸುತ್ತದೆ ಎಂದು ಸಂಘಟನೆಯ ಸ್ಥಳೀಯ ಮುಖಂಡರು ಸರಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.



ಈ ಕುರಿತು ಮುಖ್ಯಮಂತ್ರಿಗಳಿಗೆ ಬರೆದ ಮನವಿ ಮತ್ರವನ್ನು ಶುಕ್ರವಾರ ಇಲ್ಲಿನ ತಹಸೀಲ್ದಾರ್ ವಿಜಯಕುಮಾರ ಕಡಕೋಳ ಅವರಿಗೆ ಸಲ್ಲಿಸಿ ಮಾತನಾಡಿದರು.

ನೂರಾರು ವರ್ಷಗಳ ಐತಿಹಾಸಿಕ, ಸಾಂಸ್ಕೃತಿಕ, ಧಾರ್ಮಿಕ ಹೊಂದಿದ ನಗರವಾಗಿದೆ. ರಾಮನ ಬೆಟ್ಟದ ಮೂಲಕ ದೇಶದಲ್ಲಿ ಗುರುತಿಸಿಕೊಂಡಿರುವ ರಾಮನಗ, ಕೆಂಪೇಗೌಡರ ಆಡಳಿತದ ಕಾಲದಲ್ಲಿ ರಾಮದುರ್ಗ ಎಂದು ಗುರುತಿಸಿಕೊಂಡಿತ್ತು. ನಂತರದ ಕೆಂಗಲ್ ಹನುಮಂತಯ್ಯ ಅವರ ಸರಕಾರದಲ್ಲಿ ರಾಮನಗರ ಎಂದು ನಾಮಕರಣ ಮಾಡಲಾಗಿದೆ. ಇಂತಹ ಇತಿಹಾಸವುಳ್ಳ ರಾಮನಗರ ಜಿಲ್ಲೆಯನ್ನು ಕೈ ಬಿಡಲು ಶ್ರೀರಾಮ ಸೇನೆ ಬಿಡುವುದಿಲ್ಲ. ಕೂಡಲೇ ಸರಕಾರ ತನ್ನ ನಿರ್ಣಯವನ್ನು ಕೈ ಬಿಡಬೇಕು. ಇಲ್ಲದಿದ್ದರೆ ಶ್ರೀರಾಮ ಸೇನೆ ರಾಜ್ಯಾದ್ಯಂತ ಹೋರಾಟ ನಡೆಸುತ್ತದೆ ಎಂದು ಸಂಘಟನೆ ಪ್ರಕಾಶ ಮನ್ನಿ, ಪ್ರವೀಣ ಮಿರ್ಜಿ, ಪ್ರವೀಣ ಬುರುಡ, ಶಿವಾಜಿ, ಲಕ್ಷ್ಮಣ ಕುಂಬಾರ, ಶಶಿಕುಮಾರ ಖವಾಸಿ, ರಮೇಶ ಗಾಡಿವಡ್ಡರ ಎಚ್ಚರಿಕೆ ನೀಡಿದ್ದಾರೆ.



**ಮೂಡಲಗಿ : ನವದೆಹಲಿಯಲ್ಲಿ ಕೇಂದ್ರ ವಿಮಾನಯಾನ ಸಚಿವ ಕಿಂಜರಾಪು ರಾಮಮೋಹನ್ ನಾಯ್ಡು ಅವರನ್ನು ಭೇಟಿಯಾಗಿ ಕಿತ್ತೂರು ರಾಣಿ ಚೆನ್ನಮ್ಮ ಅವರ 200ನೇ ವರ್ಷಾಚರಣೆ ನಿಮಿತ್ಯ ಬೆಳಗಾವಿ ವಿಮಾನ ನಿಲ್ದಾಣಕ್ಕೆ "ಕಿತ್ತೂರ್ ರಾಣಿ ಚೆನ್ನಮ್ಮ ವಿಮಾನ ನಿಲ್ದಾಣ' ಎಂದು ಮರುನಾಮಕರಣ ಹಾಗೂ ವಿಮಾನ ನಿಲ್ದಾಣದ ಮುಂಭಾಗದಲ್ಲಿ ಚನ್ನಮ್ಮನ ಪ್ರತಿಮೆ ಸ್ಥಾಪನೆಗೆ ಮನವಿ ಮಾಡಿ ಒತ್ತಾಯಿಸಿದರು. ನನ್ನ ಮನವಿಗೆ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಮತ್ತು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ ಎಂದರು.**



**ರಬಕವಿ ಸಮೀಪದ ತಮದಡ್ಡಿ ಗ್ರಾಮದ ಸ್ಥಳಾಂತರಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿ ತಮದಡ್ಡಿ ಗ್ರಾಮಸ್ಥರು ವಿಧಾನ ಸಭೆಯ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಅವರಿಗೆ ಅಸ್ಕಿ ಗ್ರಾಮದಲ್ಲಿ ಮನವಿ ಪತ್ರ ನೀಡಿದರು. ಈ ಸಂದರ್ಭದಲ್ಲಿ ಸುರೇಶ ಅಕ್ಕಿವಾಟ, ಬಸವರಾಜ ಯಾದವಾಡ, ಬಾಬಲ್ಲಿ ಶಿರಗಾರ, ಶಂಕರ ಡೇಕಪ್ಪನವರ, ಸತ್ಯಪ್ಪ ಜುಗಳಿ ಸೇರಿದಂತೆ ಅನೇಕರು ಹಾಜರಿದ್ದರು.**

# ಮಧ್ಯಸ್ಥಿಕೆ ಕೇಂದ್ರಗಳ ಪಾತ್ರ ಮಹತ್ವದ್ದು

**ಧಾರವಾಡ :** ನ್ಯಾಯಾದಾನದ ವಿಳಂಬತೆಯನ್ನು ತಪ್ಪಿಸಲು ಮತ್ತು ನ್ಯಾಯಾಲಯಗಳ ಕಾರ್ಯ ಒತ್ತಡ ಕಡಿಮೆ ಮಾಡುವಲ್ಲಿ ಮಧ್ಯಸ್ಥಿಕೆ ಕೇಂದ್ರಗಳು ಪರಿಣಾಮಕಾರಿಯಾದ ಪಾತ್ರ ನಿರ್ವಹಿಸುತ್ತವೆ. ನ್ಯಾಯಾಧೀಶರು, ನ್ಯಾಯವಾದಿಗಳು ಕಕ್ಷಿದಾರರಿಗೆ ತ್ವರಿತ ನ್ಯಾಯಾಲಯ, ಲೋಕ ಅದಾಲತ ಮತ್ತು ಮಧ್ಯಸ್ಥಿಕೆ ಕೇಂದ್ರಗಳ ಬಗ್ಗೆ ಅರಿವು ಮೂಡಿಸಬೇಕೆಂದು ಧಾರವಾಡ ಜಿಲ್ಲಾ ಪ್ರಧಾನ ಹಾಗೂ ಸತ್ರ ನ್ಯಾಯಾಧೀಶೆ ಬಿ.ಜಿ.ರಮಾ ಅವರು ಹೇಳಿದರು.

ಅವರು ಧಾರವಾಡ ಜಿಲ್ಲಾ ಪಂಚಾಯತ ಸಭಾಗಂಣದಲ್ಲಿ ಕರ್ನಾಟಕ ಮಧ್ಯಸ್ಥಿಕೆ ಕೇಂದ್ರ, ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರ, ಉಚ್ಚ ನ್ಯಾಯಾಲಯ ಕಾನೂನು ಸೇವಾ ಸಮಿತಿ, ಧಾರವಾಡ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಧಾರವಾಡ ವಕೀಲರ ಸಂಘದ ಆಶ್ರಯದಲ್ಲಿ ಗದಗ ಮತ್ತು ಧಾರವಾಡ ಜಿಲ್ಲೆಗಳ ನ್ಯಾಯವಾದಿಗಳಿಗೆ ಮಧ್ಯಸ್ಥಿಗಾರಿಕೆ ಕುರಿತು ಪುನರ್ ಮನನದ ಎರಡು ದಿನಗಳ ಕಾರ್ಯಾಗಾರ ಉದ್ಘಾಟಿಸಿ, ಮಾತನಾಡಿದರು.




ಮಧ್ಯಸ್ಥಿಗಾರಿಕೆ ಒಂದು ಕೌಶಲ್ಯ. ಕಾನೂನು ಚೌಕಟ್ಟಿನಲ್ಲಿ ಪ್ರಕರಣಗಳನ್ನು ಸುಗಮವಾಗಿ ಪರಿಹರಿಸಬೇಕು. ಜನರ ಮಧ್ಯದಲ್ಲಿರುವ ವಿವಾದಗಳನ್ನು ಸೌಹಾರ್ದಯುತವಾಗಿ ಬಗೆ ಹರಿಸಬೇಕು ಈ ನಿಟ್ಟಿನಲ್ಲಿ ಮಧ್ಯಸ್ಥ ನ್ಯಾಯವಾದಿಗಳ ಪಾತ್ರ ಮಹತ್ವದ್ದಾಗಿದೆ ಎಂದು ಅವರು ಹೇಳಿದರು.

ಮಧ್ಯಸ್ಥಿಕೆ ಕಾರ್ಯಾಗಾರದಲ್ಲಿ ಪೂರ್ಣ ಮಾಹಿತಿ ಪಡೆದುಕೊಂಡು ಉಭಯ ಕಕ್ಷಿದಾರರಿಗೆ ಅದರ ಅನುಕೂಲತೆಗಳನ್ನು ತಿಳಿ ಹೇಳಬೇಕು. ಅವರು ಇಬ್ಬರು ಸ್ವಯಂ ಆಗಿ ಒಪ್ಪಿಗೆ ಸೂಚಿಸುವಂತೆ ಅರಿವು ಮೂಡಿಸಬೇಕು. ವಿವಾದಗಳನ್ನು ಬಗೆ ಹರಿಸಯುವ ಹಂತಕ್ಕೆ ಒಯ್ಯುವುದು ಒಂದು ಜಾಣತನ ಎಂದು ಪ್ರಧಾನ ಜಿಲ್ಲಾ ನ್ಯಾಯಾಧೀಶರು ಹೇಳಿದರು.

ನ್ಯಾಯದಾನದಲ್ಲಿ ವಿಳಂಬವಾಗದಂತೆ ಗಮನ ಹರಿಸಲು ಜನತಾ ನ್ಯಾಯಾಲಯ, ತ್ವರಿತ ನ್ಯಾಯಾಲಯ ಮತ್ತು ಮಧ್ಯಸ್ಥಗಾರಿಕೆ ಕೇಂದ್ರಗಳನ್ನು ಕಾನೂನು ಚೌಕಟ್ಟಿನಲ್ಲಿ ನ್ಯಾಯದಾನ ವ್ಯವಸ್ಥೆ ಮಾಡಿದೆ ಎಂದು ಅವರು ತಿಳಿಸಿದರು.

ಅತಿಥಿಗಳಾಗಿದ್ದ ಕರ್ನಾಟಕ ಬಾರ್ ಕೌನ್ಸಿಲ್ ಸದಸ್ಯ ವಿ.ಡಿ.ಕಾಮರಡ್ಡಿ ಹಾಗೂ ಧಾರವಾಡ ವಕೀಲರ ಸಂಘದ ಅಧ್ಯಕ್ಷ ಅಶೋಕ ಏಣಗಿ ಅವರು ಮಾತನಾಡಿದರು.

ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್ ಮಾಜಿ ಅಧ್ಯಕ್ಷ ಆನಂದಕುಮಾರ ಮಗದುಮ್ ಅವರು ಕಾರ್ಯಾಗಾರ ಉದ್ಘಾಟನೆ ಸಮಾರಂಭದ ಅಧ್ಯಕ್ಷತೆ ವಹಿಸಿ, ಮಾತನಾಡಿದರು.

ಕಾರ್ಯಗಾರ ಸಂಪನ್ಮೂಲ ವ್ಯಕ್ತಿಗಳಾದ ಬೆಂಗಳೂರು ಮಧ್ಯಸ್ಥಿಕೆಗಾರ ಕೇಂದ್ರದ ಲಕ್ಷಿ ?ಮೇಶರಾವ್ ಮತ್ತು ಬಿನಾ ದೇವರಾಜ್ ವೇದಿಕೆಯಲ್ಲಿದ್ದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪರಶುರಾಮ ದೊಡ್ಡಮನಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಲ್ಲಾ ಮಧ್ಯಸ್ಥಿಕೆ ಕೇಂದ್ರದ ದೀಪಕ ವಾಳದ ಕಾರ್ಯಕ್ರಮ ನಿರೂಪಿಸಿದರು. ಹಿರಿಯ ನ್ಯಾಯವಾದಿ ವೈ.ಪಿ.ಮದ್ನೂರ ವಂದಿಸಿದರು.

ಕಾರ್ಯಾಗಾರದಲ್ಲಿ ಧಾರವಾಡ ಜಿಲ್ಲಾ ನ್ಯಾಯಾಲಯಗಳ ವಿವಿಧ ನ್ಯಾಯಾಧೀಶರು ಗದಗ ಮತ್ತು ಧಾರವಾಡ ಜಿಲ್ಲೆಗಳ ಮಧ್ಯಸ್ಥಗಾರ ನ್ಯಾಯವಾದಿಗಳು ಭಾಗವಹಿಸಿದ್ದರು.

## ತೇರದಾಳದಲ್ಲಿ ಆಧುನಿಕ ಹೈನುಗಾರಿಕೆ ತರಬೇತಿ
# ಜಾನುವಾರಗಳ ಆರೋಗ್ಯದ ಮೇಲೆ ಗಮನ ಹರಿಸಿ

**ತೇರದಾಳ :** ಹೈನುಗಾರಿಕೆ ಮಾಡುವವರು ಜಾನುವಾರಗಳಿಗೆ ಸರಿಯಾದ ಮತ್ತು ಪೌಷ್ಠಿಕ ಆಹಾರ ನೀಡುವ ಮೂಲಕ ಅವುಗಳ ಆರೋಗ್ಯದ ಬಗ್ಗೆ ಗಮನ ಹರಿಸಬೇಕು. ಅವಾಗಲೇ ನೀವು ಹೈನುಗಾರಿಕೆಯಲ್ಲಿ ಸಾಧನೆ ಮಾಡಲು ಸಾಧ್ಯ ಎಂದು ಇಲ್ಲಿನ ಹಿರೇಮಠದ ಗಂಗಾದರ ದೇವರು ಹೇಳಿದರು.

ಸ್ಥಳೀಯ ಅಲ್ಲಮಪ್ರಭುದೇವರ ಕಲ್ಯಾಣ ಮಂಟಪದಲ್ಲಿ ಪ್ರಭುಲಿಂಗೇಶ್ವರ ರೈತ ಉತ್ಪಾದಕ ಸಂಘ ಹಮ್ಮಿಕೊಂಡಿದ್ದ ಆಧುನಿಕ ಹೈನುಗಾರಿಕೆ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಜಾನುವಾರಗಳನ್ನು ಹೊಂದಿದ ರೈತರು ಬರೀ ಲಾಭದ ಕಡೆಗೆ ಗಮನ ನೀಡದೆ ವಾತಾವರಣಕ್ಕೆ ತಕ್ಕಂತೆ ಅವುಗಳಿಗೆ ಯಾವ ಆಹಾರ, ಸುರಕ್ಷತೆಯ ಬಗ್ಗೆ ಕಾಳಜಿ ವಹಿಸಬೇಕೆಂದು ಸಲಹೆ ನೀಡಿದರು.

ಪಶು ವೈದ್ಯಾಧಿಕಾರಿಸಂಜಯಕುಮಾರ ಬುಜರುಖ ಮಾತನಾಡಿ, ಸರಕಾರ ಹೈನುಗಾರಿಕೆ ಕ್ಷೇತ್ರಕ್ಕೆ ಸಾಕಷ್ಟು




ಯೋಜನೆಗಳನ್ನು ರೂಪಿಸುತ್ತಿದೆ. ರೈತರು ಅವುಗಳ ಸದುಪಯೋಗ ಪಡೆದುಕೊಳ್ಳಬೇಕೆಂದು ಹೇಳಿದರು. ಕೆನರಾ ಬ್ಯಾಂಕ್ ಶಾಖಾಧಿಕಾರಿ ಗಿರೀಶ ಸಿದ್ಧಾರಾಮ, ಬಿಡಿಸಿಸಿ ಬ್ಯಾಂಕ್ ಕ್ಷೇತ್ರ ಸಿಬ್ಬಂದಿ ಎಸ್.ಎಫ್. ಗಾಡಿವಡ್ಡರ ಹೈನುಗಾರಿಕೆಗೆ ಬ್ಯಾಂಕುಗಳಲ್ಲಿ ಇರುವ ಸೌಲಭ್ಯ ಹಾಗೂ ಅಮುಲ್ ಸಂಸ್ಥೆಯ ಸುನೀಲ ಸೊನಕರ್ ಪಶುಗಳಿಗೆ ನೀಡುವ ಆಹಾರ ಪದ್ಧತಿ ಕುರಿತು ಮಾಹಿತಿ ನೀಡಿದರು. ತೇರದಾಳ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಕೃತಕ ಗರ್ಭಧಾರಣ ಮಾಡುವ 23 ಜನರನ್ನು ಸಂಘದ ಪರವಾಗಿ ಸನ್ಮಾನಿಸಲಾಯಿತು. ಸಂಘದ ನಿರ್ದೇಶಕ ಪರಪ್ಪ ಕುಂಬಾರ ಅಧ್ಯಕ್ಷತೆ ವಹಿಸಿದ್ದರು. ಅಧ್ಯಕ್ಷ ಬಸವರಾಜ ಕಲಬುರ್ಗಿ ಪ್ರಾಸ್ತಾವಿಕವಾಗಿ ಮಾತನಾಡಿದರು.

# ಗುಣಮಟ್ಟದ ಕಾಮಗಾರಿಗೆ ಸೂಚನೆ

**ಧಾರವಾಡ :** ಅಮ್ಮಿನಭಾವಿ ಪ್ರಾಥಮಿಕ ಆರೋಗ್ಯ ಕೇಂದ್ರ–ಕ್ಕೆ ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಅನಿರೀಕ್ಷಿತ ಭೇಟಿ ನೀಡಿ, ಮೆಲ್ದರ್ಜೆಗೊಂಡಿರುವ ಸಮುದಾಯ ಆರೋಗ್ಯ ಕೇಂದ್ರದ ನೂತನ ಕಟ್ಟಡದ ಕಾಮಗಾರಿ ಪರಿಶೀಲಿಸಿದರು.

ಕಟ್ಟಡ ಕಾಮಗಾರಿ ಮಾಡುತ್ತಿರುವ ಹೆಲ್ತ್ ಇಂಜಿನಿಯರಿಂಗ್ ಇಲಾಖೆ ಅಧಿಕಾರಿಗಳಿಂದ ಕಟ್ಟಡದ ಕಾಮಗಾರಿ, ಮುಕ್ತಾಯಗೊಳ್ಳುವ ಅವಧಿ ಬಗ್ಗೆ ಮಾಹಿತಿ ಪಡೆದರು. ಕಳೆದ (2023) ವರ್ಷ ರಾಜ್ಯ ಸರಕಾರವು ಅಮ್ಮಿನಭಾವಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೆಲ್ದರ್ಜೆಗೇರಿಸಿ,



ಸಮುದಾಯ ಆರೋಗ್ಯ ಕೇಂದ್ರವಾಗಿ ಮಾಡಿದೆ ಇದ–ಕ್ಕೆ ಅಗತ್ಯವಿರುವ ನೂತನ ಕಟ್ಟಡ ನಿರ್ಮಿಸಲು ರೂ 9.3 ಕೋಟಿ ಅನುದಾನವನ್ನು ಹೆಲ್ತ್ ಇಂಜಿನಿಯರಿಂಗ್ ಇಲಾಖೆಗೆ ಬಿಡುಗಡೆ ಮಾಡಿದೆ. 30 ಹಾಸಿಗೆ ಸೌಲಭ್ಯದ ಈ ನೂತನ ಆಸ್ಪತ್ರೆಯ ನಿರ್ಮಾಣ ಕಾರ್ಯ ಕಾಲಮಿತಿಯಲ್ಲಿ ಮುಕ್ತಾಯವಾಗಬೇಕು ಮತ್ತು ಗುಣಮಟ್ಟದ ಕಟ್ಟಡವಾಗಬೇಕೆಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚಿಸಿದರು.

ನೂತನ ಕಟ್ಟಡದ ವಾರ್ಡಗಳು, ಶಸ್ತ್ರಚಿಕಿತ್ಸೆ ವಿಭಾಗ, ಬಾಣಂ–ತಿಯರ ವಿಭಾಗ, ಶವಾಗಾರ, ವೈದ್ಯರ ಕೊಠಡಿ, ಚಿಕಿತ್ಸಾ ಕೋಣೆ ಸೇರಿದಂತೆ ಪ್ರತಿ ವಿಭಾಗಕ್ಕೆ ಜಿಲ್ಲಾಧಿಕಾರಿಗಳು ಭೇಟಿ ನೀಡಿ, ಮಾಹಿತಿ ಪಡೆದು, ಕಾಮಗಾರಿ ಗುಣಮಟ್ಟದಿಂದ ಕೂಡಿರುವಂತೆ ಸೂಚನೆ ನೀಡಿದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ.ಶಶಿ ಪಾಟೀಲ, ಸ್ಥಾನಿಕ ವೈದ್ಯಾಧಿಕಾರಿ ಡಾ.ಬೀನಾ ಶೂರ್ಪಾಲಿ ಹಾಗೂ ಹೆಲ್ತ್ ಇಂಜಿನಿಯರಿಂಗ್ ಇಲಾಖೆ ಅಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಪ್ರತಿಯೊಬ್ಬರ ಆರೋಗ್ಯವೇ ಪ್ರಮುಖ ಸಂಪತ್ತು: ಡಾ. ತುಂಗಳ

**ಜಮಖಂಡಿ :** ಆಹಾರ ಪದ್ಧತಿ ನಮ್ಮ ಜೀವನದ ಶೈಲಿಯಾಗಿದ್ದು, ಉತ್ತಮ ಆಹಾರ ಸೇವನೆ ಮಾಡಿದರೇ ಮಾತ್ರ ನಮ್ಮ ಕುಟುಂಬಗಳು ಆರೋಗ್ಯದಿಂದ ಇರಲು ಸಾಧ್ಯ. ಜಿಂಕ್ ಫುಟ್ ಬದಲಾಗಿ ಸಾವಯುವ ಮತ್ತು ನೈಸರ್ಗಿಕ ವಾಗಿ ಬೆಳೆದ ಪದಾರ್ಥಗಳನ್ನು ಸೇವಿಸಬೇಕು ಎಂದು ಜಿಲ್ಲಾ ಮಹಿಳಾ ಮೋರ್ಚಾ ರಾಜ್ಯ ಉಪಾಧ್ಯಕ್ಷೆ, ಹಿರಿಯ ಸ್ತ್ರೀರೋಗ ತಜ್ಞೆ ಡಾ.ವಿಜಯಲಕ್ಷ್ಮೀ ತುಂಗಳ ಹೇಳಿದರು.

ನಗರದ ಮೋತಿಬಾ ಗಲ್ಲಿ ನಡೆದ ಧರ್ಮಸ್ಥಳ ಗ್ರಾಮಾಭೀವೃದ್ಧಿಯ ತಾಲೂಕ ಘಟಕ ಹಮ್ಮಿಕೊಂಡಿದ್ದ ಉತ್ತಮ ಆರೋಗ್ಯಕ್ಕೆ ಪೌಷ್ಟಿಕ ಆಹಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಜಿಂಕ್ ಫುಡ್ ಸೇವೆನೆಯಿಂದ ನಾವು ರೋಗಳಿಗೆ ಆಹ್ವಾನ ನೀಡದಂತೆ. ಮಹಿಳೆಯರು ಕುಟುಂಬದ ಮುಖ್ಯಸ್ಥೆ ಆಗಿರುವದರಿಂದ ದಿನನಿತ್ಯ ಬಳಕೆ ಮಾಡುವ ಆಹಾರ ಪದಾರ್ಥಗಳ ಬಳಕೆ ಕುರಿತು ಹೆಚ್ಚಿನ ಜಾಗೃತಿ ವಹಿಸಬೇಕು. ಮಹಿಳೆಯರು ಸಿರಿಧಾನ್ಯಗಳ ಬಳಕೆ ಮಾಡುವ ಮೂಲಕ ಕುಟುಂಬವನ್ನು ರಕ್ಷಣೆ ಮಾಡಬೇಕಾಗಿದೆ ಎಂದರು.

ಜ್ಞಾನ ವಿಕಾಸ ತಾಲೂಕ ಸಮನ್ವಯಾಧಿಕಾರಿ ಶ್ರೀದೇವಿ ಮಾತನಾಡಿ, ಕಳೆದ 42



ವರ್ಷಗಳಿಂದ ಧರ್ಮಸ್ಥಳ ಸಂಸ್ಥೆ ಸಾಮಾಜಿಕ ಸೇವೆಯಲ್ಲಿ ತೊಡಗಿಕೊಂಡು ಆರ್ಥಿಕವಾಗಿ ಸಬಲರನ್ನಾಗಿಸುವ ಕಾಯಕಯಲ್ಲಿ ತೊಡಗಿಕೊಂಡಿದೆ. ಜಮಖಂಡಿ ತಾಲೂಕಿನಲ್ಲಿ ಕಳೆದ11ವರ್ಷಗಳಿಂದ ಚುಟವಟಿಕೆ ನಡೆಸುತ್ತಿದೆ. ಪ್ರಸಕ್ತ ವರ್ಷದಲ್ಲಿ 85 ನಿರ್ಗತಿಕರಿಗೆ ಮಾಶಾಸನ, 12 ನಿರ್ಗತಿಕ ಹಿರಿಯ ಜೀವಿಗಳಿಗೆ ವಾತ್ಸಲ್ಯ ಯೋಜನೆ, ಸಂಘದ ಮಹಿಳಾ ಸದಸ್ಯರ ಮಕ್ಕಳಿಗೆ ಶಿಷ್ಯ ವೇತನ ನೀಡಲಾಗಿತ್ತಿದೆ. ಮಹಿಳೆಯರನ್ನು ಕೇವಲ ಆರ್ಥಿಕವಾಗಿ ಸಬಲರನ್ನಾಗಿಸುವಲ್ಲೇ ಪ್ರತಿ ತಿಂಗಳು ಆರೋಗ್ಯ ಶಿಬಿರ, ಕಾನೂನು ಅರಿವು ಕಾರ್ಯಾಗಾರ, ಆಹಾರ ಮೇಳದಂತ ಹತ್ತಾರು ಉಪಯೋಗವಾಗುವ ಶಿಬಿರಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಶಿಕ್ಷಕಿ ಗೀತಾ ಸೂರ್ಯವಂತಿ ಮಾತನಾಡಿದರು. ವೇದಿಕೆಯಲ್ಲಿ ಕಾಂಗ್ರೆಸ್ ಮುಖಂಡ ಮೋಹನ ಇಂಗಳೆ, ಪತ್ರಕರ್ತ ಮಲ್ಲೇಶ ಆಳಗಿ, ಸಂಸ್ಥೆ ಹಣಕಾಸು ವಿಭಾಗದ ಅನೀಲ ಕಠಾಣಿ, ಸೇವಾ ಪ್ರತಿನಿಧಿ ತನುಜಾ ದೊಡಮನಿ ಸಹಿತ ಹಲವರು ಇದ್ದರು.

ಅಷ್ಟವಿನಾಯಕ, ವೈಭವಲಕ್ಷ್ಮೀ, ರಾಧಾಕೃಷ್ಣ, ತಾಯಿಬಾಯಿ, ಭಜರಂಗಬಲಿ, ಮೌಲಿ, ತಾರೆ, ಸಪ್ತಶೃಂಗ ಮಹಿಳಾ ಸಂಘದ ಸದಸ್ಯರು ಪೌಷ್ಟಿಂಗ ಆಹಾರ ಪದಾಥಗಳನ್ನು ಪ್ರದರ್ಶಿಸಿದರು. ಭಾರತಿ ಜಾಧವ ಪ್ರಾರ್ಥಿಸಿದರು. ವಲಯ ಮೇಲ್ವಿಚಾರಕಿ ಪದ್ಮಾ ಕುಳ್ಳೊಳ್ಳಿ ಸ್ವಾಗತಿಸಿ, ನಿರೂಪಿಸಿದರು. ಸೇವಾ ಪ್ರತಿನಿಧಿ ಎಂ.ಎ.ಸರೋಜನಿ ವಂದಿಸಿದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State